# ಶ್ರದ್ಧ




# ಕನ್ನಡ

## ಯು.ಪಿ. ವಿಭಾಗ

# ಕನ್ನಡ – ಒಂದು ದಿನದ ಕಾರ್ಯಗಾರ

## ಶ್ರದ್ಧ  ಒಂದು ದಿನದ ಕಾರ್ಯಗಾರ

**ಮುನ್ನುಡಿ**

ಕಲಿಕೆಯಲ್ಲಿ ತೊಂದರೆಯನ್ನು ಅನುಭವಿಸುತ್ತಿರುವ ಮಕ್ಕಳಿಗೆ
ಅವರು ಇಷ್ಟಪಡುವ ಆಟದ ಮೂಲಕ ಆಹ್ಲಾದವನ್ನೂ
ಆಸ್ವಾದನೆಯನ್ನೂ ಉಂಟುಮಾಡಿ ನಡೆಸುವ
ಕಾರ್ಯಕ್ರಮವಾಗಿದೆ 'ಶ್ರದ್ಧ'
ಮಕ್ಕಳ ಪೂರ್ಣ ಭಾಗವಹಿಸುವಿಕೆ ಸ್ವಯಂ ಖಚಿತಪಡಿಸುವ
ರೀತಿಯಲ್ಲಿ 'ಶ್ರದ್ದ' – ತಯಾರಿ ಕಾರ್ಯಕ್ರಮವನ್ನು
ರೂಪಕಲ್ಪನೆ ಮಾಡಲಾಗಿದೆ.
ಜೀವನ ನೈಪುಣ್ಯದ ಭಾಗವಾದ ಸೃಜನಾತ್ಮಕತೆ ಏಕಾಗ್ರತೆ, ಆತ್ಮವಿಶ್ವಾಸ, ಸಹವಾಸರೀತಿ, ಆಶಯವಿನಿಮಯ ಎಂಬಿವುಗಳಿಗೆ ಪ್ರಾಧಾನ್ಯತೆಯನ್ನು ನೀಡಿರುವ
ಚಟುವಟಿಕೆಗಳಾಗಿದವೆ ಈ ಕಲಿಕಾ ರೀತಿಯಲ್ಲಿ ಮಂಡಿಸುವುದು.

### ಚಟುವಟಿಕೆ 1    ಒಂದು ಹೊಡೆದರೆ ಇನ್ನೆರಡು

**ಸಮಯ :** 15 ನಿಮಿಷ
**ಉದ್ದೇಶ :** ಮಕ್ಕಳಲ್ಲಿ ಏಕಾಗ್ರತೆ, ಶ್ರದ್ಧೆಯನ್ನು ಹೆಚ್ಚಿಸುವುದಕ್ಕೆ ಅವಕಾಶವನ್ನು ಸೃಷ್ಟಿಸುವುದು.



**ಪ್ರಕ್ರಿಯೆ**

ಪ್ರೀತಿಯ ಮಕ್ಕಳೇ ನಾವು ಒಂದು ಆಟದ ಮೂಲಕ ಇಂದಿನ ಚಟುವಟಿಕೆಗಳನ್ನು ಆರಂಭಿಸುವ. ಎಲ್ಲರೂ ಬಂದು ಪರಸ್ಪರ ಕಾಣುವಂತೆ ನಿಲ್ಲಿರಿ ವೃತ್ತವನ್ನು ಮಕ್ಕಳಲ್ಲೇ ಸ್ವತಃ ಸರಿಪಡಿಸಲು ನಿರ್ದೇಶಿಸುವುದು.

ಇದು ಚಪ್ಪಾಳೆ ತಟ್ಟುವ ಆಟವಾಗಿದೆ. ಎಲ್ಲರೂ ಚಪ್ಪಾಳೆ ತಟ್ಟಿರಿ...

ಸ್ವಲ್ಪಕೂಡ ಗಟ್ಟಿಯಾಗಿ ಚಪ್ಪಾಳೆ ತಟ್ಟಲು ಸಾಧ್ಯವಿದೆಯೇ?

ಮಕ್ಕಳು ಗಟ್ಟಿಯಾಗಿ ಚಪ್ಪಾಳೆ ತಟ್ಟುವರು.

ಸರಿ, ಉತ್ತಮವಾಗಿದೆ. ಅಧ್ಯಾಪಿಕೆ ಮಕ್ಕಳನ್ನು ಪ್ರೋತ್ಸಾಹಿಸುವರು.

ಎಲ್ಲಾ ಆಟಗಳಿಗೂ ಒಂದು ನಿಯಮವಿದೆ. ಅದನ್ನು ಶ್ರದ್ಧೆಯಿಂದ ತಿಳಿದು ಆಟದಲ್ಲಿ ಭಾಗವಹಿಸಬೇಕು.

- ಅಧ್ಯಾಪಿಕೆ ಒಂದು ಸಲ ಚಪ್ಪಾಳೆ ತಟ್ಟಿದರೆ ಮಕ್ಕಳು ಎರಡು ಸಲ ಚಪ್ಪಾಳೆ ತಟ್ಟಬೇಕು.
- ಅಧ್ಯಾಪಿಕೆ ಎರಡು ಸಲ ಚಪ್ಪಾಳೆ ತಟ್ಟುವಾಗ ಮಕ್ಕಳು ಮೂರು ಸಲ ತಟ್ಟಬೇಕು
- ಅಧ್ಯಾಪಿಕೆ ಮೂರುಸಲ ತಟ್ಟುವಾಗ ಮಕ್ಕಳ ಒಂದು ಸಲತಟ್ಟಬೇಕು.
- ಅಧ್ಯಾಪಿಕೆ ಆಟ ಆರಂಭಿಸುವರು (ಕ್ರಮದಲ್ಲಿ 1, 2, 3) ಅನಂತರ ಕ್ರಮ ತಪ್ಪಿಸಿ (1,3,2) ಅಧ್ಯಾಪಿಕೆ ಚಪ್ಪಾಳೆ ತಟ್ಟವುದು.
- ಕೆಲವು ಮಕ್ಕಳಿಗೆ ಸರಿಯಾಗಿ ಚಪ್ಪಾಳೆ ತಟ್ಟಲು ಸಾಧ್ಯವಾಗುತ್ತಿಲ್ಲ
- ಕೆಲವು ಮಕ್ಕಳಿಗೆ ಸರಿಯಾಗಿ ಚಪ್ಪಾಳೆ ತಟ್ಟಲು ಸಾಧ್ಯವಾಗುತ್ತಿಲ್ಲ ಯಾಕೆ? (ಶ್ರದ್ದೆಯಿಲ್ಲ)
- ಮುಂದಿನ ಸಲ ಎಲ್ಲರೂ ಗಮನಿಸಬೇಕು
- ಸರಿ, ಅಧ್ಯಾಪಿಕೆ ಪುನಃ ಚಪ್ಪಾಳೆ ತಟ್ಟುವರು – ಮಕ್ಕಳು ಆವರ್ತಿಸುವರು
- ಚಟುವಟಿಕೆ ಮುಂದುವರಿಯುವುದು.
- ಈಗ ಹೆಚ್ಚಿನವರಿಗೆ ಮಾಡಲು ಸಾಧ್ಯವಾಗಿದೆಯಲ್ಲವೇ.
- ಎಲ್ಲರನ್ನೂ ಅಭಿನಂದಿಸುವುದು.
- ಆರಂಭದಲ್ಲಿ ಚಪ್ಪಾಳೆ ತಟ್ಟಿದ್ದಕ್ಕಿಂತ ಎಷ್ಟು ಬದಲಾವಣೆ ಕೊನೆಯಲ್ಲಿ ಕಂಡುಬಂದಿದೆ? ಯಾಕೆ? ಚರ್ಚೆ

**ಚಟುವಟಿಕೆ 2 ಉರುಟುರುಟು ಹಪ್ಪಳ**

**ಸಮಯ :** 15 ನಿಮಿಷ

**ಉದ್ದೇಶ :** ತಾಳ, ಏಕಾಗ್ರತೆ, ಎಂಬಿವುಗಳನ್ನು ಹೆಚ್ಚಿಸುವುದಕ್ಕಾಗಿ.

**ಪ್ರಕ್ರಿಯೆ:**

ಉರುಟುರುಟು ಹಪ್ಪಳ ಹುರಿದು ತೆಗೆದ ಹಪ್ಪಳ ಎಂದು ಅಧ್ಯಾಪಿಕೆ ಹೇಳುವುದು. ಮಕ್ಕಳು ಅದನ್ನು ಹೇಳುವುದು.

- ಎರಡು ಮೂರುಸಲ ತಾಳಾತ್ಮಕವಾಗಿ ಅಧ್ಯಾಪಿಕೆ ಮತ್ತು ಮಕ್ಕಳು ಹೇಳುವುದು
- ಅನಂತರ ಅಧ್ಯಾಪಿಕೆ ಚಟುವಟಿಕೆಯನ್ನು ವಿವರಿಸುವುದು.

- ಉರುಟುರುಟು ಹಪ್ಪಳ ಹುರಿದು ತೆಗೆದ ಹಪ್ಪಳ ಇದನ್ನು ಚಪ್ಪಾಳೆ ತಟ್ಟಿ ಕೇಳಿಸಬೇಕು.
- ಹೇಳಬಾರದು, ಹೇಳಿ ಚಪ್ಪಾಳೆ ತಟ್ಟಬಾರದು
- ಮಕ್ಕಳು ಪ್ರಯತ್ನಿಸುವರು. ಸರಿಯಾಗುತ್ತಿಲ್ಲ. ಮಕ್ಕಳಿಗೆ ಆವೇಶವನ್ನುಂಟುವಾಡಲು ಕೆಲವು ಪ್ರಶ್ನೆಗಳನ್ನು ಕೇಳುವುದು. ನಿಮಗೆ ಸಾಧ್ಯವಿದೆ ಎಂದು ತೋರುತ್ತಿದೆಯೇ? ಮಕ್ಕಳು ಪ್ರತಿಕ್ರಿಯೆ ನೀಡುವರು. ಆದರೆ ಎಷ್ಟು ಪ್ರಯತ್ನಗಳ ಮೂಲಕ ನಿಮಗೆ ಸಾಧ್ಯವಿದೆ? 5 ಸಲ ಪ್ರಯತ್ನಿಸಲು ಅವಕಾಶವನ್ನು ನೀಡಲಾಗುವುದು.
- ಅಧ್ಯಾಪಿಕೆ ಆರಂಭಿಸುವರು ಒಂದು, ಎರಡು, ಮೂರು...
- ಮಕ್ಕಳು ತಾಳಾತ್ಮಕವಾಗಿ ಚಪ್ಪಾಳೆ ತಟ್ಟುವರು ಅಧ್ಯಾಪಿಕೆ ಪ್ರೋತ್ಸಾಹನೀಡುವರು. ಪುನಃ ಸಮಯವನ್ನು ನೀಡುವುದು. ಅಧ್ಯಾಪಿಕೆ ಜೊತೆಯಲ್ಲಿ ತಾಳಾತ್ಮಕವಾಗಿ ಚಪ್ಪಾಳೆ ತಟ್ಟುವರು.
- ಹೆಚ್ಚು ಕಡಿಮೆ ಎಲ್ಲರೂ ಸರಿಯಾಗಿ ಚಪ್ಪಾಳೆ ತಟ್ಟುತ್ತಾರೆ. ಮಕ್ಕಳನ್ನು ಅಭಿನಂದಿಸುವುದು.
- ಆರಂಭದಲ್ಲಿ ಚಪ್ಪಾಳೆ ತಟ್ಟುವಾಗ ಎಲ್ಲರಿಗೂ ಸಾಧ್ಯವಾಗಿದೆಯೇ? ಅನಂತರ ಸರಿಯಾಗಿ ಮಾಡಲು ಸಾಧ್ಯವಾದದ್ದು ಹೇಗೆ? ಚರ್ಚೆ.

**ಮಕ್ಕಳ ಪ್ರತಿಕ್ರಿಯೆ**

- ಮನಸ್ಸೂ ಚಪ್ಪಾಳೆಯೂ ಒಂದಾಯಿತು
- ಶ್ರದ್ಧೆಯಿಂದ ಅಕ್ಷರಗಳ ಸಂಖ್ಯೆ ಪರಿಗಣಿಸಿ ತಾಳಹಾಕಲಾಯಿತು
- ಪ್ರತಿಯೊಂದು ಸಲವೂ ಪರಿಮಿತಿ ಎಲ್ಲಿ ಎಂದು ತಿಳಿಯಲಾಯಿತು
- ಎಲ್ಲರೂ ಜೊತೆಯಾಗಿ ಪರಸ್ಪರ ಸಾಹಾಯಮಾಡಿ ಮಾಡಲಾಯಿತು.
- ಮನಸ್ಸೂ ಪ್ರಯತ್ನವೂ ಒಂದಾಗಿ ಪ್ರಯತ್ನಿಸಿದಾಗ ಸಮಸ್ಯೆಗಳನ್ನು ದಾಟಲು ಸಾಧ್ಯವಾಯಿತು.

## ಚಟುವಟಿಕೆ 3 ಟೋಂ ಹೇಳುವುದು

**ಸಮಯ :** 30 ನಿಮಿಷ

**ಉದ್ದೇಶ :** ನಿರ್ದೇಶನಗಳನ್ನು ಪಾಲಿಸಿ ಶ್ರದ್ಧೆಯೊಂದಿಗೆ ಪಾಲಿಸುವುದಕ್ಕಿರುವ ಸಾಮರ್ಥ್ಯವನ್ನು ಹೆಚ್ಚಿಸುವುದು – ಏಕಾಗ್ರತೆ.

**ಪ್ರಕ್ರಿಯೆ**

ಇದು ಒಂದು ನಿರ್ದೇಶನ ನೀಡುವ ಆಟವಾಗಿದೆ. ಅಧ್ಯಾಪಿಕೆ ಹೇಳುವುದನ್ನು ಮಾಡಬಾರದು. ಟೋಂ ಹೇಳುವುದನ್ನು ಮಾಡಬೇಕು. ಮಕ್ಕಳನ್ನು ಸುತ್ತ ನಿಲ್ಲಿಸಬೇಕು.

ಆಟ ಆರಂಭಿಸುವುದು

- ಟೋಂ ಹೇಳುತ್ತಾನೆ ಎಂದು ಹೇಳಿ ಹೇಳುವ ನಿರ್ದೇಶಿಸುವ ಕಾರ್ಯಗಳನ್ನು ಮಾತ್ರ ಮಾಡಬೇಕು. ಅಲ್ಲದ ನಿರ್ದೇಶನಗಳನ್ನು ಪಾಲಿಸಬಾರದು.

  ಉದಾ: ಟೋಂ ಹೇಳುತ್ತಾನೆ ಕೈ ಎತ್ತಿ ಎಲ್ಲರೂ ಕೈ ಎತ್ತಬೇಕು. ಎಲ್ಲರೂ ಕೈ ಕೆಳಗೆ ಹಾಕಿ ಹೀಗೆ ಹೇಳಿದಾಗ ಯಾರೂ ಕೈ ಕೆಳಗೆ ಹಾಕಬಾರದು. ಕಾರ ಣ ಅದು ಟೋಂ ಹೇಳಿದ್ದಲ್ಲ. ಟೋಂ ಹೇಳದ್ದನ್ನು ಮಾಡಿದವರು ಆಟದ ವೃತ್ತದ ಒಳಭಾಗಕ್ಕೆ ಬರಬೇಕು.

- ಹೀಗೆ ನಿರ್ದೇಶನಕ್ಕೆ ವಿರುದ್ಧವಾಗಿ ಮಾಡುವವರು ವೃತ್ತದ ಒಳಕ್ಕೆ ಬರುವುದು. ಅನಂತರ ನಿರ್ದೇಶನ ಹೇಳುವಾಗ ವೃತ್ತಂಿ ನಿಂತಿರುವ ಮಕ್ಕಳನ್ನು ಗಮನಿಸಬೇಕು. ಅವರು ಮಾಡುವ ಕೆಲಸಗಳು ಸರಿಯಾಗಿದೆಯೇ ಎಂದು ಗಮನಿಸಬೇಕಾದ್ದು ವೃತ್ತದ ಒಳಗಿರುವ ಮಕ್ಕಳಾಗಿದ್ದಾರೆ.
- ಟೋಂ ಹೇಳುತ್ತಾನೆ ಚಪ್ಪಾಳೆ ತಟ್ಟಲು – ಇನ್ನೊಮ್ಮೆ ತಟ್ಟಿರಿ ಎಂದಾಗ ಚಪ್ಪಾಳೆ ತಟ್ಟುವವರು ವೃತ್ತದ ಒಳಗೆ ನಿಲ್ಲಬೇಕು. ಈ ಆಟದಲ್ಲಿ ಹೊರ ಹೋಗುವವರು ಇಲ್ಲ.
- ಆಟವನ್ನು ಮುಂದುವರಿಸುವುದು. ಅಧ್ಯಾಪಿಕೆ ಮಕ್ಕಳನ್ನು ಪ್ರತಿೊಂದು ಹಂತದಲ್ಲಿಯೂ ಒಳಕ್ಕೆ ಮಾಡಲು ಮಕ್ಕಳ ಶ್ರದ್ಧೆ ತಪ್ಪುವಂತೆ ಮಾಡುವ ಸಂಜ್ಞೆಗಳನ್ನು ಹೇಳಿ ಮಕ್ಕಳನ್ನು ವೃತ್ತದ ಒಳಕ್ಕೆ ಮಾಡಲು ಗಮನಿಸಬೇಕು.

  ಬಾಕಿಯಾದ ಮಕ್ಕಳ ಬಳಿ:

  *ನಿನ್ನ ಮನೆ ಎಲ್ಲಿ?*

  *ನಿನ್ನದ್ದೋ*

  ಈ ರೀತಿ ಮನೆ ಎಲ್ಲಿ ಎಂದು ಹೇಳಿದ ಮಕ್ಕಳನ್ನು ವೃತ್ತದ ಒಳಬಾಗಕ್ಕೆ ಮಾಡಬೇಕು. ಕಾರಣ ಟೋಂ ಹೇಳಿದ್ದಾನೆ ಎಂದು ಹೇಳದೆ ಹೆಸರು ಕೇಳಿದ್ದು. ಮಕ್ಕಳು ನಿಯಮವನ್ನು ತಿಳಿದು ಪ್ರತಿಕ್ರಿಯಿಸುವ ಸಾಮರ್ಥ್ಯವನ್ನು ಗಳಿಸುವರು.

  ಆಟ ಮುಗಿದಾಗ ಎಲ್ಲರಿಗೂ ಶ್ರದ್ಧೆ ತಪ್ಪುವ ತಿಳುವಳಿಕೆ ಉಂಟಾಗುತ್ತದೆ.

  ಅಧ್ಯಾಪಿಕೆ ಕೇಳುವರು – ಈ ಆಟವನ್ನು ಇನ್ನೊಮ್ಮೆ ಆಡಬೇಕೆಂದು ತೋರುತ್ತಿದೆಯೇ?

| ನನಗೂ ಸಾಧ್ಯವಿದೆ | • ಎಲ್ಲಾ ಆಟಗಳಲ್ಲೂ ನನಗೆ ಭಾಗವಹಿಸಲು ಸಾಧ್ಯವಾಗಿದೆ.<br>• ಶ್ರದ್ಧೆಯಿಂದ ಮಾಡಲು ಸಾಧ್ಯವಾಗಿದೆ. |
|---|---|

ಈ ಆಟದಿಂದ ತಿಳಿದುಕೊಂಡದ್ದು ಏನೆಲ್ಲಾ?

- ಶ್ರದ್ಧೆಯಿಂದ ಕೇಳಬೇಕು.
- ನಿಯಮವನ್ನು ಪ್ರತಿ ಹಂತದಲ್ಲೂ ಗಮನಿಸಬೇಕು.
- ಆಟದಿಂದ ಹೊರ ಹೋಗದಿರಲು ಉಪಾಯಗಳನ್ನು ಸೂಕ್ಷ್ಮವಾಗಿ ತಿಳಿದಿರಬೇಕು.
- ಕಲಿಕೆಯಲ್ಲಿ ಮತ್ತು ಜೀವನದಲ್ಲಿ ಸೂಕ್ಷ್ಮತೆಯನ್ನು ಪಾಲಿಸಬೇಕು.
- ಕಾರ್ಯಗಳನ್ನು ಶ್ರದ್ಧೆಯಿಂದ ಮಾಡಬೇಕಾದರೆ ಕೆಲವು ಸಂದರ್ಭಗಳಲ್ಲಿ ಅಭ್ಯಾಸಗಳಲ್ಲಿ ಬದಲಾವಣೆಯನ್ನು ಮಾಡಬೇಕು.

### ಚಟುವಟಿಕೆ 4 ಎತ್ತರ, ತೋರ, ಉದ್ದ – ಸಾಲಾಗಿ

**ಸಮಯ :** 45 ನಿಮಿಷ

**ಉದ್ದೇಶ :** ನಿರೀಕ್ಷಣೆ, ಸಮಯದ ತಿಳುವಳಇಕೆ, ಗುಂಪುತಿಳಿಯುವುದು, ನಾಯಕತ್ವ

**ಸಾಮಾಗ್ರಿ :** ಸೀಟಿ, ಚೋಕು

**ಪ್ರಕ್ರಿಯೆ**

ಅಧ್ಯಾಪಿಕೆ ಮಕ್ಕಳನ್ನು ವೃತ್ತಕಾರದಲ್ಲಿ ನಿಲ್ಲಿಸಿ ಒಂದು, ಎರಡು, ಎಂದು ಎಣಿಸಿ ಎರಡು ಗುಂಪುಗಳಾಗಿ ಮಾಡುವುದು. ಆಟದ ಸ್ಥಳದಲ್ಲಿ ಎರಡು ಗೆರೆ ಎಳೆದು ಎರಡು ಗುಂಪನ್ನೂ ಎದುರೆದುರು ಬರುವಂತೆ ನಿಲ್ಲಿಸುವುದು. ಅಧ್ಯಾಪಿಕೆ ಪ್ರಶ್ನೆಗಳನ್ನು ಕೇಳುವುದು. ಯಾವಗುಂಪಿನವರು ಶಕ್ತಿವಂತರು ನಾವು,ನಾವು, ಎಂದು ಗುಂಪುಗಳಿಗೆ ಪ್ರತಿಕ್ರಿಯಿಸಲು ಅವಕಾಶವನ್ನು ನೀಡುವುದು. ಎರಡು ಗುಂಪಿನವರೂ ನಾವು ಶಕ್ತಿವಂತರು ಎಂದು ಖಚಿತಪಡಿಸಿ ಹೇಳುವರು. ಶಕ್ತಿವಂತರಾದ ಗುಂಪನ್ನು ಕಂಡುಕೊಳ್ಳಲು ಮೂರು ಕೆಲಸಗಳನ್ನು ನೀಡುವುದಾಗಿ ಅಧ್ಯಾಪಿಕೆ ಹೇಳುವರು. ಸ್ಪರ್ಧೆ ಆರಂಭಗೊಳ್ಳುವುದಕ್ಕಿಂತ ಮೊದಲು ಕೆಲವು ನಿರ್ದೇಶನಗಳನ್ನು ನೀಡುವುದು.

- ತಂಡಕ್ಕೆ 5 ಅಂಕಗಳಂತೆ ನೀಡಲಾಗುವುದು. ಅತೀಹೆಚ್ಚು ಅಂಕ ಲಭಿಸಿದ ಗುಂಪು ಶಕ್ತರು
- ಸಮಯವನ್ನು ಸರಿಯಾಗಿ ಪಾಲಿಸಿದರೆ ಒಂದು ಅಂಕ.
- ನಿರ್ದೇಶನಗಳನ್ನು ಸರಿಯಾಗಿ ಪಾಲಿಸಿದರೆ 1 ಅಂಕ

ಸ್ಪರ್ಧೆಗಳನ್ನು ಆರಂಭಿಸುವುದಕ್ಕಿರುವ ತಯಾರಿಗಳನ್ನು ಮಾಡಿದ ಅನಂತರ ಅಧ್ಯಾಪಿಕೆ ಮಕ್ಕಳಿಗೆ ಕೆಲಸವನ್ನು ನೀಡುವರು.

**ಮೊದಲ ಕೆಲಸ**

ಪ್ರತಿ ಗುಂಪಿನವರೂ ಎತ್ತರಕ್ಕೆ ಅನುಸಾರವಾಗಿ ನಿಲ್ಲಬೇಕು. ಸಾಲಿನಲ್ಲಿ ಮೊದಲು ಎತ್ತರದವನು ಎಂಬ ಕ್ರಮದಂತೆ ಸಾಲಿನ'ಕೊನೆಯಲ್ಲಿ ೆತ್ತರ ಕಡಿಮೆಯಿರುವವನು ಎಂಬ ಕ್ರಮದಲ್ಲಿ.

1 ರಿಂದ 10ರವರೆಗೆ ಎಣಿಸುವರು ಅಧ್ಯಾಪಿಕೆ ಸೀಟಿ ಊದುವರು ಮಕ್ಕಳು ಗುಂಪಿನಲ್ಲಿ ಅನುಕ್ರಮವಾಗಿ ನಿಲ್ಲುವರು.

ಸಮಯ ಗೆರೆಯನ್ನು ಸ್ಪರ್ಶಿಸಿ ನಿಂತದ್ದಕ್ಕೂ ಅಂಕವನ್ನು ನೀಡುವರು. ಗುಂಪು ಒಂದು ಎರಡನ್ನು ನಿರೀಕ್ಷಣೆ ಮಾಡಿ ಎತ್ತರವನ್ನು ಕ್ರಮೀಕರಿಸಬೇಕು. ಅಂತರ ಗುಂಪು ಎರಡು ಒಂದರ ಎತ್ತರವನ್ನು ನಿರೀಕ್ಷಣೆ ಮಾಡಿ ಎತ್ತರವನ್ನು ಕ್ರಮೀಕರಿಸುವುದು. ಅಂಕವನ್ನು ಕ್ರಮೀಕರಣಕ್ಕೆ ಅನುಸಾರವಾಗಿ ನೀಡುವುದು. ಒಂದು ಕ್ರಮೀಕರಣಕ್ಕೆ ಒಂದು ಅಂಕದಂತೆ ಕಡಿಮೆ ಮಾಡುವುದು. ಹೆಚ್ಚು ಕ್ರಮೀಕರಣವಿದ್ದರೆ ನೆಗೆಟಿವ್ ಅಂಕ ನೀಡಿ ಮುಂದಿನ ಆಟದ ಅಂಕದಿಂದ ಕಡಿಮೆ ಮಾಡಬೇಕು.

**ಎರಡನೇ ಕೆಲಸ**

ಗುಂಪುಗಳು ತೋರಕ್ಕೆ ಅನುಸಾರವಾಗಿ ಸಾಲನ್ನು ಕ್ರಮೀಕರಿಸಿ ನಿಲ್ಲಬೇಕು. ಮೊದಲು ಸಪೂರದವನು ಕೊನೆಯಲ್ಲಿ ತೋರದವನು ಎಂಬ ಕ್ರಮದಂತೆ. ಅಧ್ಯಾಪಿಕೆ ಸೀಟಿ ಊದುವರು 5ರ ತನಕ ಎಣಿಸುವರು.

ಎತ್ತರವನ್ನು ಕ್ರಮೀಕರಸಿದಂತೆ ಕ್ರಮೀಕರಿಸಿ ಅಂಕಗಳನ್ನು ನೀಡುವುದು.

**ಮೂರನೇ ಕೆಲಸ**

ಮೂಗಿನ ಉದ್ದಕ್ಕೆ ಅನುಸಾರವಾಗಿ ಕ್ರಮೀಕರಿಸಿ ನಿಲ್ಲಲು ಗುಂಪುಗಳಲ್ಲಿ ಹೇಳುವುದು. ಗುಂಪುಗಳ ಪರಸ್ಪರ ನಿರೀಕ್ಷಣೆಯ ಅನಂತರ ಅಂಕಗಳನ್ನು ನೀಡಿ ಗುಂಪುಗಳಿಗೆ ಒಟ್ಟು ಲಭಿಸಿದ ಅಂಕಗಳನ್ನು ಘೋಷಿಸಿ ಗುಂಪುಗಳನ್ನು ಅಭಿನಂದಿಸುವುದು. ಅತೀ ಹೆಚ್ಚು ಅಂಕಲಭಿಸಿದ ಗುಂಪನ್ನು ಕಡಿಮೆ ಅಂಕ ಲಭಿಸಿದ ಗುಂಪು ಅಭಿನಂದಿಸುವುದು. ಎರಡನಮೆಯ ಗುಂಪನ್ನು ಹೆಚ್ಚು ಅಂಕ ಲಭಿಸಿದ ಗುಂಪು ಚಪ್ಪಾಳೆ ತಟ್ಟಿ ಪ್ರೋತ್ಸಾಹವನ್ನು ನೀಡುವುದು.

**ಟೀಚರ್ ಶ್ರದ್ಧ**

- ಪ್ರತಿಗುಂಪಿನಿಂದ ಒಬ್ಬ ನಾಯಕನನ್ನು ಕಂಡುಕೊಳ್ಳಲು ಹೇಳುವುದು.
- ಎಲ್ಲರಿಗೂ ಪ್ರೋತ್ಸಾಹ ಲಭಿಸುವರೀತಿಯಲ್ಲಿ ಮಂಡನಾರೀತಿ
- ವಿಜಯಿಗಳನ್ನು ಚಪ್ಪಾಳೆ ತಟ್ಟಿ ಅಧ್ಯಾಪಿಕೆಯೂ ಮಕ್ಕಳೂ ಅಭಿನಂದಿಸುವುದು. ದ್ವಿತೀಯ ಸ್ಥಾನ ಲಭಿಸಿದ ಗುಂಪನ್ನೂ ಅದೇ ರೀತಿಯಲ್ಲಿ ಅಭಿನಂದಿಸುವುದು.
- ಆರೋಗ್ಯಕರವಾದ ಸ್ಪರ್ಧೆಗೆ ಬೇಕಾದ ಪ್ರಚೋದನೆಯನ್ನು ನೀಡುವುದು.

***ಆಟ ಮುಗಿದ ಅನಂತರ ಗುಂಪುಗಳಲ್ಲಿ ಕೇಳಬೇಕಾದದ್ದು***

ಈ ಆಟದಲ್ಲಿ ಏನೆಲ್ಲಾ ಗಮನಿಸಿದಿರಿ?

(ಆಟದ ಕುರಿತಾಗಿ ಮಕ್ಕಳಿಗೆ ಹೇಳಲು ಅವಕಾಶವನ್ನು ನೀಡುವುದು. ಗುಂಪಿನಿಂದ ಕನಿಷ್ಠ 5 ಮಂದಿಯಾದರೂ ಹೇಳಬೇಕು. ಸಭಾಕಂಪನ ಇಲ್ಲದೆ ಮಾತನಾಡಲು ಇರುವ ಅವಕಾಶವನ್ನು ನೀಡುವುದು.)

**ನನಗೂ ಸಾಧ್ಯವಿದೆ**

- ನಿರೀಕ್ಷಣೆ ಮಾಡಿದ ವ್ಯತ್ಯಾಸವನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ.
- ನಿರ್ದಿಷ್ಠ ಸಮಯದ ಒಳಗೆ ಕೆಲಸಗಳನ್ನು ಪೂರ್ತಿಮಾಡಲು ಸಾಧ್ಯವಾಗುತ್ತದೆ.

**ಚಟುವಟಿಕೆ 5 ಚೆಂಡು ಪಾಸ್, ಕೋಲು, ವಲಯದಾಟುವುದು**

**ಸಮಯ :** 45 ನಿಮಿಷ

**ಉದ್ದೇಶ :** ಗುಂಪನ್ನು ತಿಳಿಯುವುದು, ಜಯವನ್ನು ತಿಳಿಯವುದು, ಏಕಾಗ್ರತೆ, ಸಮಯದ ಅರಿವು, ಆತ್ಮವಿಶ್ವಾಸ ಹೆಚ್ಚಿಸುವುದು

**ಸಾಮಾಗ್ರಿಗಳು :** ಸೀಟಿ, ವ್ಯತ್ಯಸ್ಥ ಬಣ್ಣಗಳ ಎರಡು ಚೆಂಡುಗಳು, ಎರಡು ಕೋಲು, ಇಲಾಸ್ಟಿಕ್ ವಲಯ 2, ಚೋಕು, ಬೆಂಚು/ಕುರ್ಚಿ, ಅಧ್ಯಾಪಿಕೆ ಸ್ಪರ್ಧೆಗಿರುವ ನಿರ್ದೇಶನಗಳನ್ನು ನೀಡುವರು.

**ಪ್ರಕ್ರಿಯೆ:**

ಗೆರೆಯಮೇಲೆ ನಿರಂತರವಾಗಿ ನಡೆಯುವ ಗುಂಪು ಸ್ಪರ್ಧೆಯಾಗಿದೆ ಈ ಸ್ಪರ್ಧೆಯ ಮೂಲಕ ಅತೀ ಶಕ್ತಿಯಿರುವ ಗುಂಪನ್ನು ಇನ್ನೊಮ್ಮೆ ಕಂಡುಕೊಳ್ಳುವುದಕ್ಕೆ ಇರುವ ಸಂದರ್ಭವಾಗಿದೆ. ಮೂರು ಸ್ಪರ್ಧೆಯಾಗಿದೆ ಈ ಚಟುವಟಿಕೆಯಲ್ಲಿರುವುದು. ಪ್ರತಿ ಚಟುವಟಿಕೆಗೆ 5 ಅಂಕಗಳು.

ಮೊದಲ ಚಟುವಟಿಕೆ ಚೆಂಡು ಹಸ್ತಾಂತರಿಸುವುದು

- ತಂಡಗಳನ್ನು ಸಾಲಾಗಿ ನಿಲ್ಲಲು ನಿರ್ದೇಶನವನ್ನು ನೀಡುವುದು. ಅಸೆಂಬ್ಲಿಗೆ ನಿಲ್ಲುವ ರೀತಿಯಲ್ಲಿ
- ಗುಂಪಿನಲ್ಲಿ ಇನ್ನೊಬ್ಬನನ್ನು ಮುಖಂಡನನ್ನು ಆಯ್ಕೆ ಮಾಡಬೇಕು. ಹೆಚ್ಚುಮಕ್ಕಳಿಗೆ ಮುಖಂಡನಾಗಲು ಅವಕಾಶ ಲಭಿಸುವುದಕ್ಕಾಗಿ.

- ಪ್ರತಿಯೊಂದು ಗುಂಪಿಗೆ ವ್ಯತ್ಯಸ್ತ ಬಣ್ಣದ ಚೆಂಡನ್ನು ನೀಡುವುದು.
- ಗುಂಪಿನ ಸಾಲಿನಲ್ಲಿ ಮುಂದೆ ನಿಲ್ಲುವುದು ಮುಖಂಡನಾಗಿರಬೇಕು.
- ಸೀಟಿ ಊದಿದಾಗ ಮುಖಂಡನಿಗೆ ಲಭಿಸಿದ ಚೆಂಡನ್ನು ತಲೆಯ ಮೇಲ್ಭಾಗದ ಮೂಲಕವಾಗಿ ಹಿಂದೆ ನಿಂತಿರುವವನಿಗೆ ಚಂಡನ್ನು ಹಸ್ತಾಂತರಿಸಬೇಕು.
- ಚೆಂಡು ಕೊನೆಗೆ ಲಭಿಸುವವನು ಓಡಿ ಮುಂದಕ್ಕೆ ಬಂದು ಸಾಲಿನಲ್ಲಿ ನಿಂತು ತಲೆಯ ಮೇಲ್ಭಾಗದಲ್ಲಿ ಹಿಂದೆ ನಿಂತಿರುವವನಿಗೆ ಹಸ್ತಾಂತರಿಸಬೇಕು.
- ಸಾಲಿನಲ್ಲಿ ನಿಂತಿರುವ ಎಲ್ಲರಿಗೂ ಹಸ್ತಾಂತರಿಸುತ್ತಿದ್ದಾರೆಯೇ ಎಂದು ಗಮನಿಸಬೇಕು.
- ಮುಖಂಡ ಸಾಲಿನ ಹಿಂದಕ್ಕೆ ತಲುಪುವ ತನಕ ಚೆಂಡನ್ನು ಹಸ್ತಾಂತರಿಸಬೇಕು. ಯಾವ ಗುಂಪಿನ ಮುಖಂಡ ಚೆಂಡಿನೊಂದಿಗೆ ಮುಂದಕ್ಕೆ ಮೊದಲು ಬಂದು ತಲುಪುವ ಗುಂಪು ವಿಜಯಿಯಾಗುವುದು.
- ಗುಂಪಿಗೆ 5 ಅಂಕವನ್ನು ನೀಡುವುದು. ಅನಂತರ ಪೂರ್ತಿಗೊಳಿಸಿದ ಗುಂಪಿಗೆ 3 ಅಂಕವನ್ನು ನೀಡುವುದು.
- ಸ್ಪರ್ಧೆಯಲ್ಲಿ ವಿಜಯಿಯಾದವರನ್ನು ಅಭಿನಂದಿಸುವುದು.

**ಆಟ 2 : ಕೋಲು**



***ನಿರ್ದೇಶಗಳು***

- ಗುಂಪುಗಳ ಎರಡನೆಯ ಸ್ಪರ್ಧೆ
- ಚೆಂಡು ಹಸ್ತಾಂತರಿಸಿದ ಸ್ಪರ್ಧೆಯಂತೆ ಗುಂಪಿನಿಂದ ಇನ್ನೊಬ್ಬ ಮುಖಂಡನನ್ನು ಆರಿಸುವುದು.
- ಎರಡು ಗುಂಪುಗಳಿಗೂ ಕೋಲುಗಳನ್ನು ನೀಡುವುದು.
- ಚೋಕು ಉಪಯೋಗಿಸಿ ಗುಂಪುಗಳು ನಿಲ್ಲಬೇಕಾದ ಸ್ಥಳಗಳನ್ನು ಗುರುತಿಸುವುದು. ಗುಂಪುಗಳಿಂದ ಸ್ವಲ್ಪ ದೂರದಲ್ಲಿ ಬೆಂಚು ಅಥವಾ ಕುರ್ಚಿಯನ್ನು ಇರಿಸುವುದು.
- ಸೀಟಿ ಊದಿದಾಗ ಮುಖಂಡ ಮುಂದಕ್ಕ ಓಡಿಬಂದು ಮುಂದೆ ಇರಿಸಿದ ಬೆಂಚು ಅಥವಾ ಕುರ್ಚಿಗ ಬಡಿದು ಹಿಂದಕ್ಕೆ ಬಂದು ಅನಂತರ ಸಾಲಿನಲ್ಲಿರುವವರಿಗೆ ಕೋಲನ್ನು ಹಸ್ತಾಂತರಿಸಿ ಸಾಲಿನ ಹಿಂದೆ ಹೋಗಿ ನಿಲ್ಲುವುದು.
- ಇದೇ ರೀತಿ ಕೋಲನ್ನು ಕೈ ಬದಲಾಯಿಸಿ ಸಾಲಿನ ಎಲ್ಲಾರೂ ಸಾಲಿನ ಹಿಂದಕ್ಕೆ ಬಂದಾಗ ಮುಖಂಡ ಮುಂದೆ ತಲುಪಿರುತ್ತಾನೆ.
- ಯಾವ ಗುಂಪಿನ ಮುಖಂಡ ಮುಂದೆ ತಲುಪಿ ಕೋಲನ್ನು ಬೆಂಚು/ಕುರ್ಚಿಗೆ ಹೊಡೆಯುತ್ತಾನೊ ಆಗುಂಪು ವಿಜಯಿಯಾಗುತ್ತದೆ.

**ಆಟ 3 : ವಲಯ ದಾಟುವುದು**



- ಇಲಾಸ್ಟಿಕ್ ವಲಯವನ್ನು ವೃತ್ತಾಕಾರದಲ್ಲಿರಿಸಿ ಓಡಿಹೋಗಿ ಗುಂಪಿನ ಹಿಂದೆ ನಿಲ್ಲುವುದು.
- ಗುಂಪಿನ ಎಲ್ಲಾ ಸದಸ್ಯರೂ ವಲಯವನ್ನು ದಾಟಿ ಮುಖಂಡ ಬಂದು ವಲಯವನ್ನು ದಾಟಿದಾಗ ಆಟ ಕೊನೆಗೊಳ್ಳುತ್ತದೆ. ಮೊದಲು ಪೂರ್ತಿಗೊಳಿಸುವ ತಂಡ ವಿಜಯಿಯಾಗುತ್ತದೆ.

- ವಿಜಯಗಳಿಸಿದ ತಂಡಕ್ಕೆ 5 ಅಂಕವನ್ನು ನೀಡುವುದು. ಎರಡೆನೆಯ ತಂಡಕ್ಕೆ 4 ಅಂಕಗಳನ್ನು ನೀಡುವುದು.
- ವಿಜಯಿಗಳನ್ನು ಅಭಿನಂದಿಸುವುದು.

- ಎಲ್ಲರೂ ಚಪ್ಪಾಳೆ ತಟ್ಟಿ ಎರಡು ತಂಡಗಳನ್ನೂ ಪರಸ್ಪರ ಅಭಿಂದಿಸುವುದು.
- ಉದಾಸೀನತೆ ಇಲ್ಲದೆ ಕೆಲಸಗಳನ್ನು ಮಾಡಲು ಸಾಧ್ಯವಾಗುವುದು.

**ಚಟುವಟಿಕೆ 6 ನೆನಪಿಸೋಣ, ನೋಡಿ ತಿಳಿಯುವ, ಮೂಸಿ ನೋಡುವ**

**ಸಮಯ :** 30 ನಿಮಿಷ

**ಉದ್ದೇಶ:** ಪಂಚೇಂದ್ರಿಯಗಳ ಸಾಮರ್ಥ್ಯವನ್ನು ಹೆಚ್ಚಿಸುವುದು. ನೆನಪು ಶಕ್ತಿಯನ್ನು, ಏಕಾಗ್ರತೆಯನ್ನು ಹೆಚ್ಚಿಸುವುದು.

**ಸಾಮಾಗ್ರಿಗಳು:** ವಿಸಿಲ್, ರಬ್ಬರ್ ಚೆಂಡು, ನಾಣ್ಯ, ಸ್ಟ್ಯಾಂಬ್, ಕಲ್ಲು, ಧಾನ್ಯಕ, ..... .....

**ಪ್ರಕ್ರಿಯೆ 1 : ನೆನಪಿಸುವುದು**

ಗುಂಪುಗಳೊಳಗಿನ ಆಟ ಮುಗಿದ ಅನಂತರ ಮಕ್ಕಳು ಕಣ್ಣು ಮುಚ್ಚಿ ಕುಳಿತುಕೊಳ್ಳುವುದು. ಅಧ್ಯಾಪಿಕೆ ಕೆಲವು ನಿರ್ದೇಶನಗಳನ್ನು ನೀಡುವುದು.

- ಸಣ್ಣಪ್ರಾಯದಲ್ಲಿ/ ಸಣ್ಣ ತರಗತಿಯಲ್ಲಿ ಇದೇ ರೀತಿಯಲ್ಲಿ ನೀವು ಆಡಿದ ಆಟಗಳನ್ನು (ನೆನಪಿಸಲು) ಮನಸ್ಸಿನಲ್ಲಿ ನೆನಪಿಸಲು ಹೇಳುವುದು.
- ಅಂದ ಆಡಿದ ಗೆಳೆಯರು, ಉಂಟು ಮಾಡಿದ ಶಬ್ಧಗಳು, ಸಮಯ, ಉಪಯೋಗಿಸಿದ ಆಟದ ಸಾಮಾಗ್ರಿಗಳು
- 2 ನಿಮಿಷಗಳಷ್ಟು ಸಮಯವನ್ನು ಮಕ್ಕಳಇಗೆ ನೆನಪಿಸಲು ನೀಡುವುದು.
- ನೆನಪಿಸಿದ ವಿಚಾರಗಳನ್ನು ಹೇಳಲು ಅವಕಾಶಗಳನ್ನು ನೀಡುವುದು.
- ಮುಂದೆ ಬಾರದವರಿಗೆ ಹೇಳಲು ಅವಕಾಶವನ್ನು ನೀಡುವುದು.

**ಸಮಸ್ಯೆ 2 :**

**ನಿರ್ದೇಶನಗಳು**

- ಕಣ್ಣು ಮುಚ್ಚಿ ಕುಳಿತುಕೊಳ್ಳಲು ಹೇಳುವುದು.
- ತರಗತಿ ಕೋಣೆಯಲ್ಲಿ ಕೇಳುವ ಶಬ್ಧವನ್ನು ಆಲಿಸಲು ಹೇಳುವುದು.
- ಕೇಳಿದ ಶಬ್ಧಗಳಲ್ಲಿ ಅತೀ ಸಣ್ಣ ಶಬ್ಧ
- ಕೇಳಿದ ಶಬ್ಧಗಳಲ್ಲಿ ಅತೀ ದೊಡ್ಡಶಬ್ಧ

**ಸಮಸ್ಯೆ 3 : ಮುಟ್ಟಿ ತಿಳಿಯುವುದು**



**ನಿರ್ದೇಶನಗಳು**

- ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಿಸಿ ಮಕ್ಕಳ ಕೈಯನ್ನು ಹಿಂದಕ್ಕೆ ಉದ್ದಮಾಡಿ ಹಿಡಿಯುವುದು.
- ಅಧ್ಯಾಪಿಕೆ ಮಕ್ಕಳ ಕೈಯಲ್ಲಿ ವಸ್ತುವನ್ನು ಇರಿಸುವುದು.
- ವಸ್ತುವನ್ನು ಮಕ್ಕಳು ಕೈಯಲ್ಲಿ ಸ್ಪರ್ಶಿಸಿ ಯಾವ ವಸ್ತು ಎಂದು ಸ್ಪರ್ಶಿಸಿ ತಿಳಿಯುವುದು. ತಿಳಿದ ವಿಚಾರವನ್ನು ಮನಸ್ಸಿನಲ್ಲಿರಿಸುವುದು.
- ಎಲ್ಲರಿಗೂ ಸ್ಪರ್ಶಿಸಿ ತಿಳಿಯಲು ಅವಕಾಶವನ್ನು ನೀಡುವುದು. ವ್ಯತ್ಯಸ್ಥ ಸಾಮಾಗ್ರಿಗಳನ್ನು ಬದಲಿಸಿ ಇರಿಸುವುದು.
- ಸ್ಪರ್ಶಿಸಿದ ಅನಂತರ ಅವರು ಸ್ಪರ್ಶಿಸಿದ ವಸ್ತುಗಳು ಯಾವುದೆಂದು ಹೇಳುವರು. ಸ್ಪರ್ಶಿಸಿದ ವಸ್ತುಗಳು ಅವುಗಳ ಪ್ರತ್ಯೇಕತೆಗಳು ಮೊದಲಾದವುಗಳನ್ನು ಹೇಳುವುದು.
- ಸ್ಪರ್ಶಿಸಿ ತಿಳಿಯುವುದಕ್ಕೆ – ರಬ್ಬರ್ ಚೆಂಡು, ನಾಣ್ಯ, ಸ್ಟಾಂಪ್, ಕಲ್ಲು, ಧಾನ್ಯಗಳು, ಪಚ್ಚೆಹಸರು, ಅಲಸಂಡೆ, ಬೆಂಡೆಕಾಯಿ, ಕಡಲೆ, ಬಟಾಣಿ

**ಟೀಚರ್ ಶ್ರದ್ಧ**

- ಮಕ್ಕಳು ಪಂಚೇಂದ್ರಿಯಗಳನ್ನು ಉಪಯೋಗಿಸಿ ನಿರೀಕ್ಷಣೆ ಮಾಡಲು ಊಹಿಸುವುದಕ್ಕೂ ತಿಳಿದುಕೊಳ್ಳುವುದಕ್ಕೂ ಇರುವ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕಿರುವ ಚಟುವಟಿಕೆಗಳನ್ನು ನೀಡುವುದು.

**ಸಮಸ್ಯೆ 4 : ಪರಿಮಳ ತಿಳಿಯುವುದು**

- ಮಕ್ಕಳು ಕಣ್ಣುಮುಚ್ಚಿ ಪುನಃ ಕುಳಿತುಕೊಳ್ಳುವರು.
- ಅಧ್ಯಾಪಿಕೆ ಅಡಿಗೆ ಕೋಣೆ, ಆಸ್ಪತ್ರೆಗಳನ್ನು ಮನಸ್ಸಿನಲ್ಲಿ ನೆನಪಿಸಲು ಹೇಳುವರು.
- ಅಡಿಗೆ ಕೋಣೆ, ಆಸ್ಪತ್ರೆಗಳನ್ನು ನೀವು ಹೇಗೆ ತಿಳಿದು ಕೊಳ್ಳುವಿರಿ
- ಮಕ್ಕಳು ಪರಿಮಳ ತಿಳಿದು, ನೋಡಿ ಮೊದಲಾದ ವಿಶೇಷತೆಗಳ ಆಧಾರದಲ್ಲಿ ಅಡಿಗೆ ಕೋಣೆ, ಆಸ್ಪತ್ರೆಗಳನ್ನು ವಿವರಿಸುವರು.
- ಮೊದಲು ಹೇಳದವರಿಗೆ ಹೇಳಲು ಅವಕಾಶವನ್ನು ನೀಡುವುದು.

**ಸಮಸ್ಯೆ 5 : ಊರನ್ನು ತಿಳಿಯುವುದು**

- ಮಕ್ಕಳು ಸಾಲಾಗಿ ನಿಲ್ಲುವರು.
- ಅಧ್ಯಾಪಿಕೆ ಹೇಳುವ ವಿಶೇಷತೆಗಳನ್ನು ಆಧಾರದಲ್ಲಿ ನಡೆಯುವುದು(ನೆಲದ ರೀತಿ)
- ನೆಲದಲ್ಲಿ ಕಲ್ಲು ತುಂಬಿದೆ
- ನೆಲವು ಜಾರುತ್ತಿದೆ.
- ಕಾಲು ಸುಡುತ್ತಿರುವ ನೆಲದಲ್ಲಿ ನಡೆಯುತ್ತಿದ್ದೀರಿ.
- ತುಂಬಾ ತಂಪಿರುವ/ಮಂಜುಗಡ್ಡೆಯಿಂದ ಕೂಡಿದ ನೆಲದಲ್ಲಿ ನಡೆಯುತ್ತಿರುವಿರಿ.
- ಮಳೆ ನೆನೆಯುತ್ತಾ ನಡೆಯುತ್ತಿದ್ದೀರಿ.

  ನಡೆದ ಅನಂತರ ಅನುಭವಗಳನ್ನು ಹೇಳುವುದಕ್ಕೆ ಅವಕಾಶಗಳನ್ನು ನೀಡುವುದು..
- ಏನೂ ಹೇಳದವರಿಗೆ ಅವಕಾಶವನ್ನು ನೀಡುವುದು. ಇಂಥಹವರಿಗಾಗಿ

| ಟೀಚರ್ ಶ್ರದ್ಧ | ಹೆಚ್ಚಿನ ಅವಕಾಶಗಳನ್ನು ನೀಡುವುದು. ಚಪ್ಪಾಳೆ ತಟ್ಟಿ ಪ್ರೋತ್ಸಾಹವನ್ನು ನೀಡುವುದಕ್ಕೆ ಪ್ರತ್ಯೇಕ ಗಮನವನ್ನು ನೀಡುವುದು. |
|---|---|

**ನನಗೂ ಸಾಧ್ಯವಿದೆ**

- ಸ್ಪರ್ಶಿಸಿ ಮತ್ತು ವಾಸನೆಗ್ರಹಿಸಿ, ರುಚಿಸಿ ವಸ್ತುಗಳನ್ನು ತಿಳಿಯಲು ಸಾಧ್ಯವಾಗುವುದು.
- ಕಳೆದುಹೋದ ವಿಷಯಗಳನ್ನು ನೆನಪಿಸಲು ಸಾಧ್ಯವಾಗುವುದು.

## ಚಟುವಟಿಕೆ 7 ನಿಶ್ಚಲದೃಶ್ಯ

**ಸಮಯ:** 40 ನಿಮಿಷ

**ಉದ್ದೇಶ:** ಗುಂಪು ತಿಳುವಳಿಕೆ, ಅಭಿನಯ, ದೃಶ್ಯದ ಅರಿವು ಮೊದಲಾದವುಗಳನ್ನು ಮಕ್ಕಳಲ್ಲಿ ಅಭಿವೃದ್ಧಿ ಪಡಿಸುವುದು.

**ಸಾಮಾಗ್ರಿಗಳು:** ಸೀಟಿ, ಆಶಯಗಳನ್ನು ಬರೆದ ತಖ್ತೆ(ಆಶಯಗಳು, ಆಸ್ಪತ್ರೆ, ಉತ್ಸವ, ವಿವಾಹ ವೇದಿಕೆ, ಮರಣದ ಮನೆ, ಪೋಲೀಸ್ ಸ್ಟೇಶನ್, ರೈಲ್ವೇ ಸ್ಟೇಶನ್, ಭತ್ತದ ಕೃಷಿ, ಹೋಟೆಲ್, ಟ್ರಾಫಿಕ್ ಐಲೆಂಡ್, ಸಂತೆ, ಕಟ್ಟಡ ನಿರ್ಮಾಣ, ಅಡಿಗೆಕೋಣೆ ಪರಿಚಿತವಾದ ಆಶಯಗಳ ಜೊತೆಗೆ ಪ್ರಾದೇಶಿಕ ಸಾಧ್ಯತೆಗಳನ್ನು ಒಳಗೊಳ್ಳಿಸಬೇಕು)



**ಪ್ರಕ್ರಿಯೆ:**

ಮಕ್ಕಳೇ... ನಾವು ಇಷ್ಟರ ತನಕ ಎರಡು ಗುಂಪುಗಳಾಗಿ ಆಟವನ್ನು ಆಡಿರುವುದು. ಇನ್ನು ನಾವು ನಾಲ್ಕು ಗುಂಪುಗಳಾಗಿ ಆಟವನ್ನು ಆಡುವಾ.

- ನಾಲ್ಕು ಗುಂಪುಗಳಾಗುವುದು ಹೇಗೆ 1, 2, 3,4 ಸಂಖ್ಯೆಗಳ ಮೂಲಕವಾಗಿ ಗುಂಪುಗಳಾಗುವ. ಮಕ್ಕಳು 1, 2, 3, 4 ಎಂದು ಎಣಿಸುವರು. ಒಂದು ಎಂದು ಮೊದಲು ಹೇಳಿದ ಮಗು ಚಪ್ಪಾಳೆ ತಟ್ಟುತ್ತಾ ನಡೆಯಬೇಕು. ಒಂದು ಎಂದು ಹೇಳಿದ ಇತರ ಮಕ್ಕಳು ಚಪ್ಪಾಳೆ ತಟ್ಟುತ್ತಾ ಜೊತೆ ಸೇರಬೇಕು.
- ಎರಡು ಎಂದು ಹೇಳಿದ ಮಗು ಚೆಂಡೆ ಬಡಿಯುವಂತೆ ಅಭಿನಯಿಸುತ್ತಾ ನಡೆಯಬೇಕು. ಇತರ ಮಕ್ಕಳು ಅದೇ ರೀತಿಯಲ್ಲಿ ಜೊತೆ ಸೇರಬೇಕು.
- ಮೂರು ಎಂದು ಹೇಳಿದವರು ಬಸ್ಸು ಓಡಿಸುತ್ತಾ ಗುಂಪಾಗಬೇಕು.
- ನಾಲ್ಕು ಎಂದು ಎಣಿಸಿದವರು ದೋಣಿಗೆ ಹುಟ್ಟುಹಾಕುವಂತೆ ಬಂದು ಗುಂಪಾಗಬೇಕು.

ನಾಲ್ಕು ಗುಂಪುಗಳ ಮುಖಂಡರನ್ನು ಮುಂದಕ್ಕೆ ಬರಲು ಹೇಳಿ ಎಲ್ಲರಿಗೂ ಒಂದೇ ಆಶಯವನ್ನು ನೀಡುವುದು. ಅವರೊಂದಿಗೆ ಚರ್ಚೆ.

(ಉದಾ: ಜಾತ್ರೆ)

- ಜಾತ್ರೆಯಲ್ಲಿ ಯಾವೆಲ್ಲಾ ದೃಶ್ಯಗಳನ್ನು ಕಾಣಬಹುದು? ಚೆಂಡೆ, ಚಕ್ರತಾಳ, ಮದ್ದಳೆ, ಕೊಂಬು, ವಾದ್ಯ ಮೊದಲಾದ ವಾದ್ಯೋಪಕರಣಗಳನ್ನು ಊದುವವರು, ವ್ಯಾಪಾರಿಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ಇತರ ಪ್ರಾದೇಶಿಕ ದೃಶ್ಯಗಳು ಇವೆ. ಇದೇ ರೀತಿಯಲ್ಲಿ ಪ್ರತಿಯೊಂದು ಆಶಯವನ್ನು ನೀಡುವಾಗ ಮುಖಂಡನೊಡನೆ ದೃಶ್ಯ ಸಾಧ್ಯತೆಗಳನ್ನು ಚರ್ಚಿಸಬೇಕು. ಮುಖಂಡರು ಗುಂಪಿನಲ್ಲಿ ಮಂಡಿಸಿ ಅವರ ಅಭಿಪ್ರಾಯಗಳನ್ನು ಸೇರಿಸಿ ಮಂಡಿಸಬೇಕು.
- ಅನಂತರ ನಿಶ್ಚಲ ದೃಶ್ಯಗಳನ್ನು ತಯಾರಿಸುವುದು(ಮೂರು ನಿಮಿಷಗಳ ಸಮಯಾವಕಾಶ ಮಾತ್ರ)
- ಅಧ್ಯಾಪಿಕೆಯ ನಿರ್ದೇಶನಕ್ಕೆ ಅನುಸಾರವಾಗಿ ಗುಂಪುಗಳು ನಿಶ್ಚಲವಾಗುವುವು. ಅಧ್ಯಾಪಿಕೆ ಮಕ್ಕಳ ನಿಶ್ಚಲ ದೃಶ್ಯವನ್ನು ಸೂಕ್ಷ್ಮವಾಗಿ ಮೌಲ್ಯನಿರ್ಣಯ ಮಾಡುವರು. ಅತ್ಯುತ್ತಮವಾದುದನ್ನು ಕಂಡುಕೊಳ್ಳುವರು.
- ಉತ್ತಮವಾದ ಗುಂಪಿನ ನಿಶ್ಚಲ ದೃಶ್ಯವನ್ನು ಪುನಃ ಮಂಡಿಸುವುದು ಮತ್ತು ಇತರ ಗುಂಪುಗಳಿಗೆ ನೋಡಲು ಅವಕಾಶವನ್ನು ನೀಡುವುದು. ತನ್ನ ಗುಂಪಿನ ದೃಶ್ಯದೊಂದಿಗೆ ಹೋಲಿಸಿ ಪರಿಮಿತಿಗಳನ್ನು ಮತ್ತು ಹಿರಿಮೆಗಳನ್ನು ಕಂಡುಕೊಳ್ಳುವುದು. ಯಾಕೆ ಮತ್ತು ಹೇಗೆ ಈ ಗುಂಪು ಅತ್ಯುತ್ತಮವಾದುದು– ಸರಳ ಚರ್ಚೆ ನಡೆಸುವುದು.
- ಅನಂತರ ಗುಂಪಿನಿಂದ ಹೊಸ ಮುಖಂಡನನ್ನು ಆರಿಸಿ ಹೊಸ ಆಶಯವನ್ನು ನೀಡುವುದು. ಆಶಯದ ದೃಶ್ಯ ಸಾಧ್ಯತೆಯ ಕುರಿತು ಸರಳ ಚರ್ಚೆಯನ್ನು ಮುಖಂಡ ಗುಂಪಿನಲ್ಲಿ ಮಂಡಿಸುವುದು. ಮೂರು ನಿಮಿಷಗಳ ತಯಾರಿಯ ಅನಂತರ ಮಂಡನೆ. ಮೌಲ್ಯನಿರ್ಣಯ ಮಾಡುವುದು. 10 ಆಶಯಗಳನ್ನು ಮಂಡಿಸಲು ಅವಕಾಶಯನ್ನು ನೀಡುವುದು. ಪ್ರತಿಯೊಂದು ಹಂತದಲ್ಲಿಯೂ ಮಕ್ಕಳಿಗೆ ಅಗತ್ಯವಾದ ಸಹಾಯವನ್ನು ಅಧ್ಯಾಪಿಕೆ ನೀಡುವುದು ಮತ್ತು ಅಗತ್ಯ ಪ್ರೋತ್ಸಾಹವನ್ನು ನೀಡುವುದು.
- ಈ ಚಟುವಟಿಕೆಯ ಮೂಲಕವಾಗಿ ಮಕ್ಕಳಲ್ಲಿ ಉಂಟಾದ ಬದಲಾವಣೆಗಳು ಯಾವುವು? ಚರ್ಚೆ.

**ಮಕ್ಕಳ ಪ್ರತಿಕ್ರಿಯೆ**

- ಆಶಯಗಳನ್ನು ವೇಗವಾಗಿ ಚರ್ಚಿಸಲು ಸಾಧ್ಯವಾಗಿದೆ. ಎಲ್ಲರೂ ನಿಶ್ಚಲ ದೃಶ್ಯದ ರೂಪೀಕರಣದಲ್ಲಿ ಮತ್ತು ಅಭಿಪ್ರಾಯ ಹೇಳುವುದರಲ್ಲಿ ಭಾಗವಹಿಸಿದರು.
- ಉದಾಸೀನ ತೋರಿದವರಿಗೂ ಆಸಕ್ತಿ ಉಂಟಾಯಿತು.
- ಇನ್ನೊಬ್ಬರ ಅಭಿಪ್ರಾಯದೊಂದಿಗೆ ಸೇರಿಸಿ ತನ್ನ ಅಭಿಪ್ರಾಯಗಳನ್ನು ಉತ್ತಮ ಪಡಿಸುವ ಪ್ರಯತ್ನ ಆರಂಭಿಸಿದರು.

**ಟೀಚರ್ ಶ್ರದ್ಧ**

- ನಿರಂತರ ಮೌಲ್ಯನಿರ್ಣಯ ಮಾಡಲೂ ಅಭಿನಂದಿಸಲು ಪರಿಮಿತಿಗಳನ್ನು ಪರಿಹರಿಸುವುದಕ್ಕಾಗಿ ಸಂದರ್ಭಗಳನ್ನು ಒದಗಿಸಲಾಗಿದೆ. ಮಕ್ಕಳ ಅಭಿಪ್ರಾಯದೊಂದಿಗೆ ಹೆಚ್ಚು ಪ್ರತಿಕ್ರಿಯೆ ನೀಡಲು ತಯಾರಾದರು. ಮಕ್ಕಳ ಅಭಿಪ್ರಾಯ ಪ್ರಕಟನೆಗಾಗಿ ಹೆಸರು ಕರೆದು ಹೇಳಲು ಪ್ರಯತ್ನಿಸಬೇಕು.

- ಗುಂಪು ಆಟದಲ್ಲಿ ಪ್ರತಿಯೊಂದಕ್ಕೂ ಮುಖಂಡನನ್ನು ಬದಲಾಯಿಸಿ ಹೆಚ್ಚಿನ ಸದಸ್ಯರಿಗೆ ಅವಕಾಶವನ್ನು ನೀಡಿ ಎಲ್ಲಾ ಮುಖಂಡರನ್ನೂ ಪ್ರತ್ಯೇಕವಾಗಿ ಹೇಳಿ ಅಭಿನಯಿಸುವಂತೆ ಮಾಡಬೇಕು.
- ಗುಂಪು ಸ್ಪರ್ಧೆಗೆ ಆವೇಶ ಲಭಿಸುವಂತೆ ಮಾಡಲು ಚಪ್ಪಾಳೆ ತಟ್ಟಿ ಪ್ರೋತ್ಸಾಹ ನೀಡಬೇಕು.

- ಪ್ರತಿ ಆಟದಲ್ಲಿ ವಿಜಯಿಗಳನ್ನು ಅಭಿನಂದಿಸುವುದು.
- ಮೂರು ಆಟಗಳಲ್ಲಿಯೂ ಲಭಿಸಿದ ಒಟ್ಟು ಅಂಕವನ್ನು ಹೇಳಿ ವಿಜಯಿಗಳನ್ನು ಅಭಿನಂದಿಸಬೇಕು.
- ಆಟ ಮುಗಿದ ಅನಂತರ ಆಟದ ಮೂಲವಾಗಿ ನಡೆದ ವಿಚಾರಗಳನ್ನು ಪ್ರಕಟಪಡಿಸಿದ ಸಾಮರ್ಥ್ಯಗಳನ್ನು ಹೇಳಿಸುವುದು – ಅಭಿಪ್ರಾಯ ಪ್ರಕಟನೆ
- ಆಟಕ್ಕೆ ಅಗತ್ಯವಾದ ಸಾಮಗ್ರಿಗಳನ್ನು ಮೊದಲೇ ತಯಾರಿಸಬೇಕು.

ನನಗೂ ಸಾಧ್ಯವಿದೆ

- ಕೇಳಿದ ವಿಷಯಗಳು ಬಿಟ್ಟುಹೋಗದೆ ಉಳಿದವರಲ್ಲಿ ಹೇಳಲು ಸಾಧ್ಯವಿದೆ.

## ಚಟುವಟಿಕೆ 8 ಹೆಕ್ಕುವ ಆಡುವ

**ಸಮಯ:** 30 ನಿಮಿಷ

**ಉದ್ದೇಶ:** ಸೃಜನಾತ್ಮಕತೆ, ಆಶಯ ವಿನಿಮಯ, ಭಾವನೆ.

**ಸಾಮಗ್ರಿ :** ಸುತ್ತಮುತ್ತಲು ಹೆಕ್ಕುವ ವಸ್ತುಗಳು 10 ಸಂಖ್ಯೆ



**ಪ್ರಕ್ರಿಯೆ**

**ನಿರ್ದೇಶನಗಳು**

- ಪ್ರತಿಯೊಂದು ಗುಂಪೂ ಅವರಿಗೆ ಇಷ್ಟವಾದ 10 ವಸ್ತುಗಳನ್ನು ಸಂಗ್ರಹಿಸಿ ಬರುವುದು. ಅಧ್ಯಾಪಿಕೆ 4 ಗುಂಪುಗಳಿಂದ ವ್ಯತ್ಯಸ್ತವಾದ 10 ವಸ್ತುಗಳನ್ನು ಆರಿಸುವುದು.
- ಗುಂಪುಗಳು ಕಾಣುವಂತೆ ತರಗತಿಯ ಮಧ್ಯದಲ್ಲಿ ಇರಿಸುವುದು.
- ಎಲ್ಲಾ ಗುಂಪಿನವರು ವಸ್ತುಗಳನ್ನು ನಿರೀಕ್ಷಣೆ ಮಾಡುವುದು.
- ಗುಂಪುಗಳಿಗೆ ನಿರ್ದೇಶನವನ್ನು ನೀಡುವುದು. ಎಲ್ಲಾ ವಸ್ತುಗಳನ್ನೂ ಉಪಯೋಗಿಸಿ ಒಂದು ಆಶಯವನ್ನು ನೀವು ಪ್ರಕಟಪಡಿಸಬೇಕು. ವಸ್ತುಗಳ ಸಾಮಾನ್ಯ ಉಪಯೋಗವಲ್ಲದ ಇತರ ಉಪಯೋಗವನ್ನು ಮಾಡಬೇಕು.
- (ಉದಾ: ಕೋಲನ್ನು ಬಡಿಯುವುದಕ್ಕಲ್ಲದೆ ವಾಹನವಾಗಿಯೂ, ಹಿಡಿಸೂಡಿಯಾಗಿಯೂ, ಕೊಳಲಾಗಿಯೂ ಉಪಯೋಗಿಸಬಹುದು)
- ಪ್ರತಿಯೊಂದು ಗುಂಪಿಗೆ ಪ್ರಕಟನೆಯನ್ನು ಆಲೋಚಿಸುವುದಕ್ಕಾಗಿ 5 ನಿಮಿಷ ಸಮಯ ನೀಡುವುದು.

- ಗುಂಪುಗಳ ಮಂಡನೆಗೆ 3 ನಿಮಿಷ ಸಮಯ. ಪ್ರತಿಯೊಂದು ಗುಂಪು ಮಂಡಿಸುವುದನ್ನು ಇತರ ಗುಂಪಿನವರು ನೋಡಿ ಮೌಲ್ಯನಿರ್ಣಯ ಮಾಡಬೇಕು. ಮೌಲ್ಯನಿರ್ಣಯ ಮಾನದಂಡವನ್ನು ಮಕ್ಕಳು ರೂಪಿಸಬೇಕು. ಎಲ್ಲಾ ವಸ್ತುಗಳನ್ನು ಉಪಯೋಗಿಸಿದ್ದಾರೆ. ಎಲ್ಲರೂ ಭಾಗವಹಿಸಿ ವಸ್ತುಗಳನ್ನು ಇತರ ವಸ್ತುಗಳಾಗಿ ಉಪಯೋಗಿಸಲಾಗಿದೆ. ಮೊದಲಾದ ವಿಚಾರಗಳು ಒಳಗೊಂಡಂತೆ ಮೌಲ್ಯನಿರ್ಣಯ ಮಾಡಬೇಕು.
- ಉತ್ತಮವಾಗಿ ಮಂಡಿಸಿದ ಗುಂಪನ್ನು ಅಭಿನಂದಿಸಬೇಕು.
- ಪ್ರತಿಯೊಂದು ಮಗುವಿನ ಹಿರಿಮೆಯನ್ನು ಕಂಡುಕೊಂಡು ಹೇಳಲು ಅವಕಾಶವನ್ನು ನೀಡಬೇಕು.

> - ಅಭಿನಯಕ್ಕೆ ಬೇಕಾದ ವಸ್ತುಗಳನ್ನು ಮೊದಲೇ ಕಂಡುಕೊಳ್ಳಬಹುದು.
> - ಗುಂಪುಗಳ ಆಲೋಚನೆಯಲ್ಲಿ ಕೆಲವು ಸಹಾಯಗಳನ್ನು ನೀಡಬಹುದು.
> - ಇಲ್ಲಿ ಮೌಲ್ಯನಿರ್ಣಯ ಮಾಡಿ ಹೇಳುವ ಸಾಮರ್ಥ್ಯವನ್ನು ಗಮನಿಸಬೇಕು.

**ಚಟುವಟಿಕೆ 9** **(1) ಗಾದೆಗಳು-ನಾಟಕ (8ನೇ ತರಗತಿ)**

**ಸಮಯ:** 60 ಮಿನಿಟುಗಳು

**ಉದ್ದೇಶ :** ಗಾದೆಗಳನ್ನು ವ್ಯಾಖ್ಯಾನಿಸಿ ಅವುಗಳ ಆಶಯವನ್ನು ಬಳಸಿಕೊಂಡು ಪುಟ್ಟ ನಾಟಕಗಳಾಗಿ ಮಂಡಿಸುವ ಸಾಮರ್ಥ್ಯವನ್ನು ಬೆಳೆಸುವುದು.

**ಸಾಮಗ್ರಿ :** ಗಾದೆಗಳು

**ಪ್ರಕ್ರಿಯೆ :**

ಮಕ್ಕಳು ನಾಲ್ಕು ಗುಂಪುಗಳಾಗುವುದು. ಪ್ರತಿಯೊಂದು ಗುಂಪಿಗೂ ಗಾದೆಯನ್ನು ಬರೆದ ಒಂದೊಂದು ಚೀಟಿಯನ್ನು ನೀಡುವುದು.

| | |
|---|---|
| 1) ಒಗ್ಗಟ್ಟಿನಲ್ಲಿ ಬಲವಿದೆ | • ಅತಿ ಆಸೆ ಗತಿ ಗೇಡು |
| 2) ಮನಸ್ಸಿದ್ದರೆ ಮಾರ್ಗ | • ಅಡಿಕೆಗೆ ಹೋದ ಮಾನ ಆನೆ ಕೊಟ್ಟರು ಬಾರದು |
| 3) ಕೈ ಕೆಸರಾದರೆ ಬಾಯಿ ಮೊಸರು | • ಹಿತ್ತಿಲ ಗಿಡ ಮದ್ದಲ್ಲ |
| 4) ಅಂಗೈ ಹುಣ್ಣಿಗೆ ಕನ್ನಡಿಯೇಕೆ? | • ಆಪತ್ತಿಗಾದವನೆ ನೆಂಟ |

- ಮಕ್ಕಳು ತಮಗೆ ಸಿಕ್ಕಿದ ಗಾದೆಯನ್ನು ಗುಂಪಿನಲ್ಲಿ ಚರ್ಚಿಸಿ ಆಶಯವನ್ನು ವಿಪುಲೀಕರಿಸಿ, ಅದನ್ನು ಒಂದು ಪುಟ್ಟ ನಾಟಕವನ್ನಾಗಿ ರೂಪೀಕರಿಸಿ 10 ನಿಮಿಷದೊಳಗೆ ಅಭಿನಯಿಸಬೇಕು.
- ಪ್ರತಿಯೊಂದು ಗುಂಪುಗಳು ಮಂಡಿಸುವಾಗ ಇತರ ಗುಂಪುಗಳ ಮೌಲ್ಯ ನಿರ್ಣಯಮಾಡಿ ಯಾವ ಗಾದೆಯಾಗಿದೆ? ಗಾದೆಯ ಆಶಯ ಮಂಡನೆಯಲ್ಲಿ ಎಷ್ಟರ ಮಟ್ಟಿಗೆ ಪ್ರತಿಬಿಂಬಿಸಲ್ಪಟ್ಟಿದೆ ಎಂದೂ ವಿಶದೀಕರಿಸಬೇಕು ಹೀಗೆ ಪ್ರತಿಯೊಂದು ಗುಂಪು ಮಂಡಿಸಬೇಕು. ಮತ್ತು ಪರಸ್ಪರ ಮೌಲ್ಯ ನಿರ್ಣಯ ಮಾಡಬೇಕು. ಯಾವ ಸಾಮರ್ಥ್ಯಗಳು ಅಭಿವೃದ್ಧಿಗೊಳ್ಳುತ್ತವೆ?

1. ಓದಿ ಆಶಯಗಳನ್ನು ವಿಕಾಸಗೊಳಿಸುವ ಸಾಮರ್ಥ್ಯ
2. ಆಶಯಗಳನ್ನು ವ್ಯಾಖ್ಯಾನಿಸುವ ಸಾಮರ್ಥ್ಯ
3. ಇತರರ ಆಶಯಗಳೊಂದಿಗೆ ತನ್ನ ಆಶಯಗಳನ್ನು ಸೇರಿಸಿಕೊಳ್ಳುವ ಸಾಮರ್ಥ್ಯ (ಹೊಂದಿಸಿಕೊಳ್ಳುವ ಸಾಮರ್ಥ್ಯ)
4. ಆಶಯಗಳನ್ನು ಅಭಿನಯ ಸನ್ನಿವೇಶಗಳಾಗಿ ಬದಲಾಯಿಸುವ ಸಾಮರ್ಥ್ಯ
5. ಭಾವನೆಯಿಂದೊಡಗೂಡಿ ಅಭಿನಯಿಸುವ ಸಾಮರ್ಥ್ಯ.

| ಟೀಚರ್ ಶ್ರದ್ಧ | • ಮಕ್ಕಳನ್ನು ಪ್ರತಿಯೊಂದು ಹಂತದಲ್ಲಿ ಪ್ರೋತ್ಸಾಹಿಸುವುದು ಸಹಾಯ ಮಾಡುವುದು. ಅಭಿನಂದಿಸುವುದು. |
|---|---|

- ಹೆಚ್ಚು ಸಹಾಯ ಅಗತ್ಯವಿರುವ ಗುಂಪಿನೊಂದಿಗೆ ಹೆಚ್ಚು ವೇಳೆ ವ್ಯಯಿಸಬೇಕು.
- ಮಕ್ಕಳಿಗೆ ಕಷ್ಟವೆನಿಸಲು ಕಾರಣವೇನೆಂಬುದನ್ನು ಮೌಲ್ಯನಿರ್ಣಯ ಮಾಡಿಕೊಳ್ಳಬೇಕು ಮತ್ತು ಪರಿಹರಿಸಬೇಕು.
- 'ಶ್ರದ್ಧ'ದಲ್ಲಿ ಭಾಗವಹಿಸುವ ಮಕ್ಕಳನ್ನು ತರಗತಿಗಳಲ್ಲಿ ಪ್ರತ್ಯೇಕವಾಗಿ ಪರಿಗಣಿಸಿ, ಪ್ರೋತ್ಸಾಹ ನೀಡಬೇಕು.

**ಚಟುವಟಿಕೆ 10 (2) ಆಡುವ ಹಾಡುವ (ತರಗತಿ 5)**



## ಪ್ರಕ್ರಿಯೆ

ತಂದಿನಾನೋ ತಂದಿನ್ನಾನೋ ತಂದಿನ್ನಾನೋ ತಾನೋ
ತಂದಿನ್ನಾನೋ ತಂದಿನ್ನಾನೋ ತಂದಿನ್ನಾನೋ ತಾನೋ
ಬನ್ನಿರೆಲ್ಲ ಗೆಳೆಯರೆ ಹೊಲದ ಕಡೆಗೆ ಹೋಗುವ
ಹೊಲವ ಉತ್ತು ಹಸನುಗೊಳಿಸಿ ಭತ್ತವನ್ನು ಬಿತ್ತುವ ತಂದಿನ್ನಾನೋ....
ಕಳೆಗಳನ್ನು ಕೀಳುವ ಗೊಬ್ಬರವ ಹಾಕುವ
ಗಿಡವು ದೊಡ್ಡದಾಗಲು ನಿತ್ಯ ನೀರು ನೀಡುವ ತಂದಿನ್ನಾನೋ....
ಪೈರುಗಳನ್ನು ಕೊಯ್ಯುವ, ಸೂಡಿಯನ್ನು ಕಟ್ಟುವ
ಸೂಡಿ ಬಡಿದು, ಭತ್ತ ಪಡೆದು ರಾಶಿ ರಾಶಿ ಹಾಕುವ
ಭತ್ತವನ್ನು ಬೇಯಿಸಿ ಬಿಸಿಲಿನಲ್ಲಿ ಒಣಗಿಸಿ

ಯಂತ್ರದಲ್ಲಿ ಹಾಕುತ ಅಕ್ಕಿಯನ್ನು ಪಡೆಯುವ ತಂದಿನ್ನಾನೋ
ಅಕ್ಕಿಯನ್ನು ಬೇಯಿಸಿ ಅನ್ನ ಮಾಡುವ
ಗೆಳೆಯರೆಲ್ಲ ಸೇರಿ ಬಹು ಸಂತಸದಿ ಉಣ್ಣುವ ತಂದಿನ್ನಾನೋ

- ಪದ್ಯವನ್ನು ಟೀಚರ್ ಮತ್ತು ಮಕ್ಕಳು ಜತೆಯಾಗಿ ಹಾಡುವುದು. ಆ ಮೇಲೆ ಪ್ರತಿಯೊಂದು ಗುಂಪು ಹಾಡುವುದು.
- ಮುಂದುವರಿದು ನಾಲ್ಕು ಗುಂಪುಗಳೂ ಹಾಡಿ ಅಭಿನಯಿಸುವುದು. ಇತರ ಗುಂಪುಗಳು ಮೌಲ್ಯ ನಿರ್ಣಯ ಮಾಡುವುದು. ಉತ್ತಮವಾದುದನ್ನು ಕಂಡುಕೊಂಡು, ಯಾಕೆ ಉತ್ತಮವಾಗಿದೆ ಎಂದು ಹೇಳುವುದು.
- ಈ ಚಟುವಟಿಕೆಯ ಮೂಲಕ ಮಕ್ಕಳು ಯಾವ ಯಾವ ಸಾಮರ್ಥ್ಯಗಳನ್ನು ಗಳಿಸುತ್ತಾರೆ?

1. ಜನಪದ ಶೈಲಿಯ ಹಾಡುಗಳನ್ನು ರಾಗವಾಗಿ ಗುಂಪಿನಲ್ಲಿ ಹಾಡಲು.
2. ಜನಪದ ಹಾಡುಗಳಿಗೆ ಬಾಯಿತಾಳವನ್ನು ಸೇರಿಸಿ ತಾಳಬದ್ಧವಾಗಿ ಹೇಳಲು
4. ಜನಪದ ಹಾಡುಗಳ ಆಶಯವನ್ನು ಗ್ರಹಿಸಿ ರಂಗ ಭಾಷೆ ತಯಾರಿಸಿ ಮಂಡಿಸಲು (ರಂಗಭಾಷೆ– ಪದ್ಯಗಳ ಸಾಲನ್ನು ವಾಕ್ಯದ ರೂಪದಲ್ಲಿ/ಸಂಭಾಷಣಾ ರೂಪದಲ್ಲಿ ಬರೆಯುವುದು)

**ಟೀಚರ್ ಶ್ರದ್ಧ**

- ಮಕ್ಕಳ ಸಾಮರ್ಥ್ಯಗಳನ್ನು ತಿಳಿದುಕೊಳ್ಳುವುದು
- ಸಹಾಯ/ಬೆಂಬಲ ಬೇಕಾದವರನ್ನು ಆರಿಸುವುದು
- ಮಕ್ಕಳನ್ನು ಪ್ರೋತ್ಸಾಹಿಸುವುದು/ಅಭಿನಂದಿಸುವುದು
- 'ಶ್ರದ್ಧ'ದಲ್ಲಿ ಭಾಗವಹಿಸುವ ಮಕ್ಕಳನ್ನು ತರಗತಿಯಲ್ಲೂ ಪ್ರತ್ಯೇಕವಾಗಿ ಪರಿಗಣಿಸುವುದು. ಪ್ರೋತ್ಸಾಹಿಸುವುದು.

ಯು.ಪಿ. ವಿಭಾಗದ ಮಕ್ಕಳಿಗೆ ಹೇಳಬೇಕಾದ ಕಥೆ

# ಮರ ಮತ್ತು ಮಗು

ಒಂದೂರಿನಲ್ಲಿ ಒಂದು ಶಾಲೆ. ಆ ಶಾಲೆಯಲ್ಲಿ ಒಬ್ಬ ಹುಡುಗ ಕಲಿಯುತ್ತಿದ್ದ. ಒಂದು ದಿನ ಅವನು ಮಧ್ಯಾಹ್ನಕ್ಕೆ ತಿನ್ನಲು ಏನೂ ಇಲ್ಲದ ಕಾರಣ ಎಲ್ಲರಿಂದಲೂ ದೂರವಿದ್ದು ಒಂದು ಮಾವಿನ ಮರದಡಿಯ ಆಯಾಸದಿಂದ ಕಣ್ಣು ತೂಗಿದ. ಆಗ ಅವನಿಗೆ ಯಾರೂ ಮಾತನಾಡಿದಂತೆ ಅನಿಸಿತು. "ಮಗೂ, ಎಲ್ಲರೂ ಮಧ್ಯಾಹ್ನದ ಊಟ ಸೇವಿಸುತ್ತಿರುವಾಗ ನೀನು ಮಾತ್ರ ನನ್ನ ಮರದ ಅಡಿಯಲ್ಲಿ ಕುಳಿತು ಯಾಕೆ ದುಃಖಿಸುತ್ತಿರುವೆ?" ಎಂದು ನಿದ್ದೆಯ ಅಮಲಿನಲ್ಲಿ ಮರ ಅವನಲ್ಲಿ ಕೇಳಿಸಿದಂತೆ ಅನಿಸಿತು. ಮನೆಯಲ್ಲಿ ನಿನ್ನೆ ಏನೂ ಇರಲಿಲ್ಲ. ಆಹಾರವಿಲ್ಲದೆ ಉಪವಾಸವಾಗಿತ್ತು. ಕ್ಷೀಣ ಸ್ವರದಲ್ಲಿ ಸಂಕೋಚದಿಂದ ಅವನು ಹೇಳಿದನು. "ದುಃಖಿಸಬೇಡ ನಾನು ನಿನಗೆ ನನ್ನ ಹಣ್ಣುಗಳನ್ನು ನೀಡುತ್ತೇನೆ." ಮರ ಸ್ವಲ್ಪ ಹಣ್ಣಗಳನ್ನು ಕೆಳಗೆ ಉದಿರಿಸಿತು. ಹುಡುಗ ಹಣ್ಣುಗಳನ್ನು ತಿಂದು ಹಸಿವು ನೀಗಿಸಿಕೊಂಡನು. ಮರಕ್ಕೆ ಧನ್ಯವಾದ ಹೇಳಿ ಶಾಲೆಗೆ ಹೋದನು. ದಿನಾಲೂ ಹುಡುಗ ಮಧ್ಯಾಹ್ನ ಮರದಡಿಗೆ ಬರುತ್ತಿದ್ದ ಮರ ಹಣ್ಣಗಳನ್ನು ಕೊಡುತ್ತಿತ್ತು. ಎಲ್ಲವೂ ವಾಡಿಕೆಯಂತೆ ನಡೆಯುತ್ತಿತ್ತು. ದಿನ ಕಳೆದಂತೆ ಮರ ಮತ್ತು ಹುಡುಗ ಗೆಳೆಯರಾದರು. ಅವರು ಹಲವಾರು ವಿಚಾರಗಳನ್ನು ಪರಸ್ಪರ ಹಂಚಿಕೊಳ್ಳುತ್ತಿದ್ದರು. ಒಂದು ದಿನ ಮರ ನೀಡಿದ ಹಣ್ಣುಗಳನ್ನು ತಿಂದಾಗಲೂ ಹುಡುಗನ ಮುಖದಲ್ಲಿ ಸಂತೋಷವಿರಲಿಲ್ಲ. ಮರಕೇಳಿತು. "ಏನಿದು ಈ ದಿನ ನಿನ್ನ ಮುಖ ಬಾಡಿ ಹೋಗಿದೆ?" ಹುಡುಗ ಹೇಳಿದ "ಫೀಸು ಕಟ್ಟಬೇಕಾದ ದಿನಾಂಕ ಕಳೆಯಿತು. ಫೀಸು ಕಟ್ಟಲಿಲ್ಲ. ಶಾಲೆಯಿಂದ ಹೊರ ಹಾಕಿದರು." ಮರ ಹೇಳಿತು, "ದುಃಖಿಸಬೇಡ ಈ ದಿನ ನಾನು ಇನ್ನು ಹೆಚ್ಚು ಹಣ್ಣುಗಳನ್ನು ನೀಡುತ್ತೇನೆ. ಆ ಹಣ್ಣುಗಳನ್ನು ಮಾರಿದರೆ ಹಣ ಸಿಗಬಹುದು." ಹುಡುಗ ಮರ ಹೇಳಿದಂತೆ ಮಾಡಿದೆ. ಹಣ್ಣುಗಳನ್ನು ಮಾರಿದ ಹಣದಿಂದ ಫೀಸು ಕಟ್ಟಿದ ಅವನ ದುಃಖ ನೀಗಿತು. ಪರೀಕ್ಷೆಗಳು ಕಳೆದುವು. ಪರೀಕ್ಷೆಯ ಗಡಿಬಿಡಿಯಲ್ಲಿ ಹುಡುಗ ಮರದ ಬಳಿಗೆ ಬರುವುದನ್ನು ಕಡಿಮೆ ಮಾಡಿದನು. ಪರೀಕ್ಷೆ ಮುಗಿದ ಕೊನೆಯ ದಿನ ಹುಡುಗ ಬೀಳ್ಕೊಡಲು ಮರದ ಬಳಿಗೆ ಹೋದ. ತುಂಬಾ ಹೊತ್ತು ಮರದೊಂದಿಗೆ ಇದ್ದು ಹುಡುಗ ಅಲ್ಲಿಂದ ಹೊರಡುವಾಗ ಮರದೊಡನೆ, ಇನ್ನು ನಾನು ಈ ಪಟ್ಟಣಕ್ಕೆ ಬರುವುದಿಲ್ಲ. ನನ್ನ ಶಾಲಾ ಜೀವನ ಕೊನೆಗೊಂಡಿತು. ಕಾಲೇಜಿಗೆ ಸೇರಲು ಬೇಕಾದ ಹಣ ನನ್ನ ಮನೆಯಲಿಲ್ಲ. ಇನ್ನು ನಾವಿಬ್ಬರೂ ಭೇಟಿಯಾಗಲಾರೆವು ಎಂದು ಹೇಳುತ್ತಾ ಬಿಕ್ಕಿ ಬಿಕ್ಕಿ ಅತ್ತನು. "ದುಃಖಿಸಬೇಡ. ನೀನು ನನ್ನ ಒಂದು ಕೊಂಬೆಯನ್ನು ಮುರಿದು ಮಾರಿಬಿಡು. ನಿನಗೆ ಅಗತ್ಯವಿರುವಷ್ಟು ಹಣ ಸಿಗಬಹುದು. ಕಾಲೇಜಿಗೆ ಹೋಗಿ ಕಲಿತು ಜಾಣನಾಗು" ಎಂದು ಮರ ಹೇಳಿತು.

ಅಂತೆಯೇ ಹುಡುಗ ಕಾಲೇಜಿನ ಮೆಟ್ಟಲೇರಿದ. ಈಗ ಅವನಿಗೊಬ್ಬ ಜೊತೆಗಾತಿ ದೊರೆತಳು. ಒಂದು ದಿನ ಆ ಸ್ನೇಹಿತೆಯೊಂದಿಗೆ ಹುಡುಗ ಆ ಮರದ ಬಳಿಗೆ ತಲುಪಿದ. ಆ ದಿನ ಅವನು ಮರದೊಂದಿಗೆ ಹೆಚ್ಚೇನು ಮಾತನಾಡಲಿಲ್ಲ. 'ಹೊಸ ಜೊತೆಗಾತಿ ದೊರೆತುದರಿಂದ ನನ್ನನ್ನು ಮರೆತನೇ?' ಮರ ತನ್ನಲ್ಲೇ ಹೇಳಿತು. ಹೊರಟುವಾಗಲೂ ಹುಡುಗ ಮರದೊಡನೆ ಹೋಗಿ ಹೇಳಲಿಲ್ಲ. "ಚಿಂತೆ ಇಲ್ಲ. ತನ್ನ ಜೊತೆಗಾತಿಯೊಂದಿಗೆ

ನನ್ನ ಬಳಿಗೆ ಬಂದನಲ್ಲಾ" ಅಷ್ಟು ಸಾಕು. ಮರ ತನಗೆ ತಾನೇ ಸಮಾಧಾನ ಮಾಡಿಕೊಂಡಿತು. ಮಗದೊಂದು ದಿನ ಅತೀವ ದುಃಖದಿಂದ ಆ ಹುಡುಗ ಮರದ ಬಳಿಗೆ ಬಂದ. "ಬಹಳಷ್ಟು ದುಃಖಿತನಾಗಿರುವೆಯಲ್ಲಾ. ಈ ದಿನ ಏನಾಯ್ತು ನಿನಗೆ?" ಮರ ಕೇಳಿತು. ನನ್ನ ಸ್ನೇಹಿತೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಹೊರ ದೇಶಕ್ಕೆ (ವಿದೇಶಕ್ಕೆ) ಆಹ್ವಾನಿಸುತ್ತಿದ್ದಾಳೆ. ಅಲ್ಲಿಗೆ ಹೋಗುವಷ್ಟು ಹಣ ನನ್ನಲಿಲ್ಲ. ನಾನು ಹೇಗೆ ಹೋಗಲಿ. ಜೊತೆಗಾಗಿ ಅಗಲುವಿಕೆ ಸಹಿಸಲಸಾಧ್ಯ. ಅವನು ತಲೆತಗ್ಗಿಸಿ ನಿಂತನು. "ಅಳಬೇಡ ನೀನು ನನ್ನನ್ನು ಕಡಿದು ಮಾರಿಬಿಡು. ವಿದೇಶದಲ್ಲಿ ಹೋಗಿ ಕಲಿಯಲು ಬೇಕಾದಷ್ಟು ಹಣ ಸಿಗಬಹುದು". ಅವನಿಗೆ ಸಂತೋಷವಾಯಿತು. ಅವನು ಮರವನ್ನು ಕಡಿದು ಮಾರಿದ. ವಿದೇಶದಲ್ಲಿ ಕಲಿತು ಉದ್ಯೋಗ ದೊರೆಯಿತು. ಜೊತೆಗಾತಿಯನ್ನು ಮದುವೆಯಾದ. ಕಾಲಗಳುರುಳಿದವು. ಒಂದು ದಿನ ಬೆನ್ನು ಬಾಗಿದ ವೃದ್ಧನೊಬ್ಬ ನಶಿಸಿಹೋದ ಮರದ ಬಳಿಗೆ ಬಂದನು. ಅಲ್ಲಿ ಕುಳಿತು. ಬಿಕ್ಕಳಿಸಿದನು. ಅವನ ಕಣ್ಣಿನಿಂದ ಕಣ್ಣೀರು ಧಾರೆ ಧಾರೆಯಾಗಿ ಕಡಿದ ಮರದ ಬೊಡ್ಡೆಯ ಮೇಲೆ ಸುರಿಯಿತು. 'ಯಾರು ನೀನು?' ಕ್ಷೀಣವಾದ ದನಿಯೊಂದು ಮರದ ಬೊಡ್ಡೆಯಿಂದ ಕೇಳಿಸಿತು. ನಾನು ನಿನ್ನ ಹಳೆಯ ಸ್ನೇಹಿತ. ನೀನು ನಿನ್ನ ದೇಹವನ್ನೇ ತ್ಯಾಗ ಮಾಡಿ ನನಗೆ ಸಹಾಯ ಮಾಡಿದೆ. ಆ ಹಳೆಯ ಹುಡುಗ ನಾನು "ಏನಾಯ್ತು? ಪುನಃ ದುಃಖಿತನಾಗಿರಲು ಕಾರಣವೇನು? ನಿನ್ನ ಜೊತೆಗಾತಿ ಎಲ್ಲಿ?" ಇನ್ನು ಸಹಾಯ ಮಾಡಲು ನನ್ನಲ್ಲೇನಿದೆ? ಮರ ಕೇಳಿತು.

ವಿದೇಶಕ್ಕೆ ಹೋಗುವುದು, ಜೊತೆಗಾತಿಯನ್ನು ಮದುವೆಯಾಗಿ ಬಾಳ್ವೆ ನಡೆಸುವುದೇ ಸುಖವೆಂದು ತಿಳಿದುದು ತಪ್ಪಾಯಿತು. ವೃದ್ಧಾಪ್ಯದಲ್ಲಿ ನನಗೆ ಯಾರೂ ಇಲ್ಲ. ಆ ವೃದ್ಧನ ಮಾತು ಕಣ್ಣೀರಲ್ಲಿ ಕರಗಿ ಹೋಯಿತು. ಆ ವ್ಯಕ್ತಿಯ ಕಣ್ಣೀರು ಸುರಿದ ಮರದ ಬೊಡ್ಡೆಯಲ್ಲಿ ಸಣ್ಣದೊಂದು ಚಿಗುರು ಕಾಣಿಸಿತು. ನಿರೀಕ್ಷೆಯ ದಾರಿ ಗೋಚರಿಸಿದಂತೆ.

- ಅಧ್ಯಾಪಿಕೆ ಈ ಕಥೆಯನ್ನು ಭಾವನಾತ್ಮಕವಾಗಿ ಮಂಡಿಸುವುದು
- ಕಥೆ ಆಲಿಸಿದಾಗ ಮನಕ್ಕೆ ತಟ್ಟಿದ ಒಂದು ಭಾಗವನ್ನು ಚಿತ್ರಿಸುವುದು. (ಎ ಫೋರ್ ಶೀಟ್, ಸ್ಕೆಚ್, ಕ್ರಯೋನ್‌ಗಳನ್ನು ಎಲ್ಲರಿಗೂ ನೀಡುವುದು)
- ಈ ಕಥೆಯ ನಾಲ್ಕು ಪ್ರಧಾನ ಭಾಗಗಳು(ದೃಶ್ಯಗಳು) ಯಾವುವು? (ಮರದಡಿಯಲ್ಲಿ ಕುಳಿತು ಹಣ್ಣು ತಿನ್ನುತ್ತಿರುವ ಹುಡುಗ, ಕೊಂಬೆ ಮುರಿದ ಮರ, ಜೊತೆಗಾತಿಯೊಂದಿಗೆ ಮರದ ಕೆಳಗೆ ಕುಳಿತ ಹುಡುಗ, ಮರದ ಬೊಡ್ಡೆಯನ್ನು ನೋಡಿ ಕಣ್ಣೀರು ಸುರಿಸುವ ವೃದ್ಧನಾದ ಆ ವ್ಯಕ್ತಿ)
- ಆ ಹುಡುಗ ನಾನಾಗಿದ್ದರೆ ಏನು ಮಾಡುತ್ತಿದ್ದೆ?
- ಹುಡುಗ ಮತ್ತು ಮರ ತಮ್ಮೊಳಗೆ ನಡೆಸಿದ ಸಂಭಾಷಣೆಯನ್ನು ಮಂಡಿಸಬಹುದೇ?

**ಚಟುವಟಿಕೆ 3 : ಹಾಡುವ ಕಲಿಯುವ**

**ಸಮಯ :** 20 ನಿಮಿಷ

**ಪ್ರಕ್ರಿಯೆ:** ಸ್ಲೈಡ್‌ಗಳು/ಚಾರ್ಟಿನಲ್ಲಿ ಬರೆದ ಕವಿತೆಯನ್ನು ಎಲ್ಲರೂ ಸೇರಿ ಹಾಡುವುದು.

**ನನ್ನ ಮರ**

ಒಂದು ದಿನ ನಿದ್ದೆಯಲ್ಲಿ
ಕನಸನೊಂದ ಕಂಡೆ
ಕನಸಿನಲ್ಲಿ ಮನೆಯ ಮುಂದೆ
ಗಿಡವನೊಂದು ನೆಟ್ಟೆ
ಗಿಡಕೆ ನೀರು ಗೊಬ್ಬರವ
ನಿತ್ಯ ನಾನು ಕೊಟ್ಟೆ
ಬೆಳೆದ ಹಚ್ಚ ಹಸಿರು ಮರಕೆ
ಹೆಸರನೊಂದನಿಟ್ಟೆ
ಬೆಳೆದು ನಿಂತ ಮಾಮರವು
ಕಾಯಿ ಹಣ್ಣು ಕೊಟ್ಟಿತು

ಎಲ್ಲ ಜೀವ ಜಾಲಗಳಿಗೆ ಆಶ್ರಯವನು ನೀಡಿತು

- ಎಲ್ಲರೂ ಒಟ್ಟಾಗಿ ಹಾಡಿ ಮಂಡಿಸುವುದು.
- ಅಧ್ಯಾಪಿಕೆ ಅರ್ಥಪೂರ್ಣತೆಯೊಂದಿಗೆ ಪದ ವಿಂಗಡಿಸಿ ಓದಬೇಕು.
- 'ನಾನು ಕಂಡ ಕನಸು' (ಮಕ್ಕಳು ತಾವು ಕಂಡ ಕನಸಿನ ಕುರಿತು ಹೇಳಲು ಸಂದರ್ಭ ಒದಗಿಸಬೇಕು (10 ನಿಮಿಷ)
- ಅಧ್ಯಾಪಿಕೆ ಪುನಃ ಕವಿತೆಯನ್ನು ಓದಿ, ಕೆಳಗೆ ಕೊಟ್ಟಿರುವ ಪ್ರಶ್ನೆಗಳನ್ನು ಕೇಳಿದ ಅನಂತರ ಓದಬೇಕು. (ಮಗುವಿನ ಗಮನವನ್ನು ಕವಿತೆಯ ಕಡೆಗೆ ಸೆಳೆಯಬೇಕು).
- ಕನಸ್ಸಿನಲ್ಲಿ ನೆಟ್ಟಿರುವುದು ಏನನ್ನು?
- ಬೆಳೆದು ನಿಂತ ಮರ ಏನು ಮಾಡಿತು?

ಮಕ್ಕಳ ಪ್ರತಿಕ್ರಿಯೆಯನ್ನು ಕರಿಹಲಗೆಯಲ್ಲಿ ಬರೆಯುವುದು

- ನೀವು ಮಣ್ಣಿನಲ್ಲಿ ಹೊಂಡ ಮಾಡಿ ಏನೇನು ಹಾಕಿರುವಿರಿ?
- ಕನಸ್ಸಿನಲ್ಲಿ ಗಿಡವನ್ನು ನೆಟ್ಟಿರುವುದು ಎಲ್ಲಿ?

(ಬೇರೆ ಬೇರೆ ರೀತಿಯ ಉತ್ತರಗಳನ್ನು ನಿರೀಕ್ಷಿಸಬಹುದು.)

**ಎರಡನೇ ದಿನದ ಚಟುವಟಿಕೆಗಳು**

## ‘ಶ್ರದ್ಧ’

**ಉದ್ದೇಶ**

- ಒಗಟು, ಗಾದೆ ಮೊದಲಾದವುಗಳಿಗೆ ಸಂಬಂಧಿಸಿದ ಆಟಗಳಲ್ಲಿ ತೊಡಗಿಸಿಕೊಳ್ಳಲು.
- ಒಗಟು, ಗಾದೆಗಳನ್ನು ದೈನಂದಿನ ಜೀವನದ ಸನ್ನಿವೇಶಗಳೊಂದಿಗೆ ಹೊಂದಿಸಿ ವ್ಯಾಖ್ಯಾನಿಸಲು
- ವಿವಿಧ ವಸ್ತುಗಳಿಗೆ ಸಂಬಂಧಿಸಿ ಹೊಸ ಒಗಟುಗಳನ್ನು ರಚಿಸಲು
- ವಿವಿಧ ಸನ್ನಿವೇಶಗಳು, ಘಟನೆಗಳು ಎಂಬಿವುಗಳಿಗೆ ಸಂಬಂಧಿಸಿದವುಗಳನ್ನು ರಚಿಸಲು
- ಸಮಾನವಾದ ಗಾದೆಗಳನ್ನು ಕಂಡುಕೊಳ್ಳಲು

**ಸಾಮಗ್ರಿ:** ಗಾದೆಗಳನ್ನು ಬರೆದ ಚಾರ್ಟ್/ಸ್ಲೈಡ್, ಎ ಫೋರ್ ಶೀಟ್

ಗಾದೆ, ಒಗಟುಗಳನ್ನು ಬರೆದ ಕಾಗದಗಳು (ಪ್ರತಿಯೊಂದು ಬೇರೆ ಬೇರೆ ಎ ಫೋರ್ ಕಾಗದದಲ್ಲಿ ಬರೆದಿರಬೇಕು–ಗುಂಪುಗಳ ಸಂಖ್ಯೆಗನುಗುಣವಾಗಿ)

***ಚಟುವಟಿಕೆ ನೀಡುವಾಗ ಅಧ್ಯಾಪಿಕೆ ಗಮನಿಸಬೇಕಾದ ವಿಚಾರಗಳು***

ಒಗಟು, ಗಾದೆಗಳನ್ನು ಮಂಡಿಸುವಾಗ ತಾಳಬದ್ಧವಾಗಿ (ಸ್ವರದ ಏರಿಳಿತದೊಂದಿಗೆ ಮಂಡಿಸಬೇಕು.

ವಸ್ತುಗಳ ವಿಶೇಷತೆಗಳು/ಪ್ರತ್ಯೇಕತೆಗಳಿಗೆ ಸಂಬಂಧಿಸಿ ಹೊಸ ಒಗಟುಗಳನ್ನು ರಟಿಸಲು ಸಂದರ್ಭವೊದಗಿಸಬೇಕು. ಒಂದೋ ಎರಡೋ ಒಗಟುಗಳನ್ನು ಅಧ್ಯಾಪಿಕೆ ರಚಿಸಬೇಕು.

– ಆದಷ್ಟು ತರಗತಿಯಲ್ಲಿರುವ ವಸ್ತುಗಳನ್ನು ಬಳಸಿಕೊಂಡು ರಚಿಸುವುದು ಉತ್ತಮ.

ಚಟುವಟಿಕೆಯ ಪ್ರತಿಯೊಂದು ಹಂತದಲ್ಲೂ ತೊಂದರೆ ಅನುಭವಿಸುವವರನ್ನು ಉತ್ತಮವಾಗಿ ಪ್ರತಿಕ್ರಿಯಿಸುವವರನ್ನು ಗಮನಿಸಬೇಕು. ಉತ್ತಮವಾದವುಗಳನ್ನು ಮಗುವಿನ ವೈಯಕ್ತಿಕ ದಾಖಲೆಯಾಗಿ ಬರೆದಿಡಬೇಕು.

**ಪ್ರಕ್ರಿಯೆ**

ಅಧ್ಯಾಪಿಕೆ ಒಂದು ಒಗಟು ಹೇಳುವುದು.

ಅಡಿ ಬಂಡೆ,

ನಡು ಕಂಬ

ಮೇಲೆ ಕೊಡೆ

ಮಕ್ಕಳು ಅವರ ತಿಳುವಳಿಕೆಗನುಗುಣವಾಗಿ ಉತ್ತರಿಸಲಿ.

(ತಪ್ಪು ಉತ್ತರ ಹೇಳಿದಾಗ ಅಧ್ಯಾಪಿಕೆಯ ಪ್ರತಿಕ್ರಿಯೆ ಹೀಗಾಗಬಹುದಲ್ಲವೇ?

ಊಹೂಂ, ಸ್ವಲ್ಪ ಸರಿಯಾಗಿದೆ. ಇನ್ನೂ ಸರಿಯಾಗಿ ಹೇಳುವಿರಾ?

ಈ ಉತ್ತರ ಅಲ್ಲವಲ್ಲಾ ಮಗೂ.

ಇನ್ನೊಮ್ಮೆ ಪ್ರಯತ್ನಿಸು ನೋಡೋಣ.

(ಈ ರೀತಿಯ ಪ್ರತಿಕ್ರಿಯೆಗಳಿಂದ ಏನೇನು ಪ್ರಯೋಜನಗಳಿವೆ.)

ಆವಶ್ಯವೆನಿಸಿದರೆ ಸೂಚನೆಗಳನ್ನು ನೀಡಬೇಕು. (ಸರಿಯುತ್ತರ–ಸುವರ್ಣಗೆಡ್ಡೆ (ಕೇನೆ)

ಸರಿಯಾದ ಉತ್ತರ ಹೇಳುವವರನ್ನು ಅಭಿನಂದಿಸಬೇಕು.

ಸುವರ್ಣಗೆಡ್ಡೆಯನ್ನು ಹೇಗೆ ಒಗಟಿಗೆ ಹೊಂದಿಸಿಕೊಳ್ಳಬಹುದು?

'ಅಡಿಬಂಡೆ' ಎಂದು ಸುವರ್ಣಗೆಡ್ಡೆಗೆ ಹೇಗೆ ಹೊಂದಿಸಿಕೊಳ್ಳಬಹುದು. ಅದೇ ರೀತಿ 'ನಡುಕಂಬ', 'ಮೇಲೆ ಕೊಡೆ' ಇತ್ಯಾದಿಗಳನ್ನು ಒಗಟಿನಲ್ಲಿ ಬಳಸಿಕೊಂಡುದರ ಬಗ್ಗೆ ಚರ್ಚೆ ನಡೆಸುವುದು.

ಈ ರೀತಿಯ ಒಂದೋ ಎರಡೋ ಒಗಟುಗಳನ್ನು ಅಧ್ಯಾಪಿಕೆ ಮಂಡಿಸಬೇಕು.

'ಹಸಿರು ಕೊಡದಲ್ಲಿ ಸಿಹಿ ನೀರು'(ಸೀಯಾಳ) 'ಸೀಯಾಳ' ಎಂಬ ಉತ್ತರ. ಹೇಗೆ ಹೊಂದಿಕೆಯಾಗುತ್ತದೆ ಎಂದು ಚರ್ಚಿಸುವುದು.

ಕೆಂಪು ಚೀಲದಲ್ಲಿ ಚಿನ್ನದ ನಾಣ್ಯ (ಒಣ ಮೆಣಸು) ಈ ಒಗಟಿನಲ್ಲೂ 'ಕೆಂಪು ಚೀಲ' 'ಚಿನ್ನದ ನಾಣ್ಯಗಳು' ಉತ್ತರ 'ಒಣಮೆಣಸು' ಹೇಗೆ ಎಂದು ಚರ್ಚಿಸಬೇಕು. ತನ್ಮೂಲಕ ಒಗಟುಗಳ ವಿಶೇಷತೆ ಏನು ಎಂಬ ಅರಿವು ಉಂಟಾಗಬೇಕು.

- ವಸ್ತುವಿನ ವಿಶೇಷತೆಗಳು ಸೂಚನೆಗಳಾಗಿರಬೇಕು.
- ಕುತೂಹಲ ಹುಟ್ಟಿಸುವಂತಿರಬೇಕು.
- ಅಡಗಿರುವ ವಿಷಯಗಳನ್ನು ಕಂಡು ಹಿಡಿಯುವ ಪ್ರೇರಣೆ ಉಂಟಾಗಬೇಕು.

ನಿಮಗೆಷ್ಟು ಒಗಟುಗಳು ತಿಳಿದಿವೆ?

**ಪ್ರಶ್ನೆ ಕೇಳಿ ಚರ್ಚೆ**

ನಾವು ಒಂದು ಒಗಟು ಸ್ಪರ್ಧೆ ನಡೆಸೋಣವೇ?

ಮೂರೋ ನಾಲ್ಕೋ ಮಕ್ಕಳಿರುವ ಗುಂಪುಗಳನ್ನಾಗಿ ಮಾಡುವುದು.

ಪ್ರತಿಯೊಂದು ಗುಂಪೂ ತಮಗೆ ಗೊತ್ತಿರುವ ಒಗಟುಗಳನ್ನು ಕಂಡುಕೊಂಡು ಒಗಟು ಕೇಳಲು ಸಿದ್ಧಪಡಿಸುವುದು.

ಅಗತ್ಯವಿದ್ದರೆ ಮೊದಲೇ ತಯಾರಿಸಿರುವ ಒಗಟುಗಳನ್ನು ಮಕ್ಕಳಿಗೆ ನೀಡಬಹುದು. (ಪ್ರತಿಯೊಂದು ಗುಂಪಿಗೂ ವ್ಯತ್ಯಸ್ತವಾದ 10 ಒಗಟುಗಳಂತೆ) ಮಕ್ಕಳು ಪರಸ್ಪರ ಒಗಟು ಕೇಳುವುದು. ಅಧ್ಯಾಪಿಕೆ ಅಂಕ ನೀಡುವುದು. ಅತೀ ಹೆಚ್ಚು ಅಂಕ ಗಳಿಸಿದ ಗುಂಪನ್ನು ಅಭಿನಂದಿಸುವುದು.

**ಟೀಚರ್ ಶ್ರದ್ಧ**

- ಇಲ್ಲಿ ಅಧ್ಯಾಪಿಕೆ ಹೇಗೆ ಸಹಾಯ ಮಾಡಬೇಕು?
- ಒಗಟುಗಳನ್ನು ಓದಲು ಕಷ್ಟಪಡುವವರಿಗೆ,
- ಒಗಟುಗಳು ತಾಳಬದ್ಧವಾಗಿ ರಚಿಸಲು
- ಉತ್ತರಗಳ ಸೂಚನೆಗಳನ್ನು ಹೇಳಲು (ಅಗತ್ಯವಿದ್ದರೆ)
- ಹಿಂಜರಿಕೆಯಿಂದ ಇರುವವರನ್ನು ಪ್ರೋತ್ಸಾಹಿಸುವುದು.

(ಹೆಚ್ಚು ಗಮನ ಹರಿಸಬೇಕಾದ ವಿಚಾರಗಳನ್ನು ದಾಖಲಿಸವಿರಲ್ಲವೇ?

- ನಾವೂ ಒಗಟುಗಳನ್ನು ರಚಿಸೋಣವೇ
- ಅಧ್ಯಾಪಿಕೆ ಒಂದು ಒಂದು ಕೊಡೆಯನ್ನು ತೋರಿಸುತ್ತಾರೆ. ಕೊಡೆಯ ಕುರಿತು ನಮಗೆ ಏನೇನು ಹೇಳಬಹುದು.?
- ಎಂಟು ಎಲುಬಿನವನು
- ಒಂದು ಕಾಲಿನವನು
- ಬಿಸಿಲನ್ನು ಸಹಿಸುತ್ತಾನೆ
- ಮಳೆಯನ್ನೂ ಸಹಿಸುತ್ತಾನೆ
- ಈ ರೀತಿಯಲ್ಲಿ ವಸ್ತುಗಳ ವಿಶೇಷತೆಗಳನ್ನು ಸೂಚಿಸಿ ಹೊಸ ಒಗಟಗಳನ್ನು ರಚಿಸುತ್ತಾರೆ. ಒಂದೋ ಎರಡೋ ಬಾಯ್ದೆರೆಯಾಗಿ ಹೇಳಿದ ನಂತರ, ಚಟುವಟಿಕೆಗೆ ಕಾಗದ ನೀಡಿ ಗುಂಪಿನಲ್ಲಿ ಒಗಟುಗಳನ್ನು ರಚಿಸಲು ಸೂಚಿಸುವುದು. (ಒಗಟುಗಳ ಪೂರ್ಣತೆಯನ್ನು ಈ ಸಂದರ್ಭದಲ್ಲಿ ನಿರೀಕ್ಷಿಸಬಾರದು.)

ನನಗೂ ಸಾಧ್ಯವಿದೆ.

ಆದಷ್ಟು ಉತ್ತಮವಾಗಿ ರಚಿಸಬೇಕು. ಅಧ್ಯಾಪಿಕೆ ಸಹಾಯ ಮಾಡುವುದು.

ನನಗೆ ಸಾಧ್ಯವಾಗಿರುವುದು. ಮಕ್ಕಳು ತಮ್ಮ ಪುಸ್ತಕದಲ್ಲಿ ದಾಖಲಿಸಲು ಸಂದರ್ಭ ನೀಡುವುದು. ಮಕ್ಕಳ ಮಂಡನೆ ಚರ್ಚೆ, ಒಗಟುಗಳು (ನಾಲ್ಕು ಗುಂಪುಗಳಿಗೂ ನೀಡಬೇಕಾದುದು) ಚಟುವಟಿಕೆಯ ಕಾಗದ (ವರ್ಕ್ ಶೀಟ್) ಎಂಬಿವುಗಳನ್ನು ಅನುಬಂಧವಾಗಿ ನೀಡಲಾಗಿದೆ.)

**ಒಗಟುಗಳು**

1. ಹಗ್ಗ ಹಾಸಿದೆ ಕೋಣ ಮಲಗಿದೆ
2. ಅಡ್ಡ ಮರದಲ್ಲಿ ಬೊಡ್ಡ ಕುಳಿತಿದ್ದಾನೆ
3. ಒಂದು ಬಾಟ್ಲಿಯಲ್ಲಿ ಎರಡು ಔಷಧಿ
4. ಉದ್ದ ಮರದಲ್ಲಿ ಕೆಂಪು ಸನ್ಯಾಸಿ

5. ಅಂಕು ಡೊಂಕು ಸಂಕಪಾಲ ಮೂರು ತಲೆ ಹತ್ತು ಕಾಲು

6. ಅಮ್ಮ ಅಂದರೆ ಮುಟ್ಟುತ್ತೆ ಅಕ್ಕ ಅಂದ್ರೆ ಮುಟ್ಟೋಲ್ಲ

7. ಬಂಡೆ ಮೇಲೆ ಕುಣಿಯುತ್ತೆ ತಂತಿ ಮೇಲೆ ಮಲಗುತ್ತೆ

8. ಅಟ್ಟದಲ್ಲಿ ಪುಟ್ಟ ಲಕ್ಷ್ಮಿ

9. ಗೇಣುದ್ದ ಹುಡುಗಿಗೆ ಮಾರುದ್ದ ಜಡೆ

10. ಹಸಿರು ಕೊಡದಲ್ಲಿ ಸಿಹಿನೀರು

1. ಬಿಳಿ ಬಟ್ಟಲಲ್ಲಿ ಕಪ್ಪು ದ್ರಾಕ್ಷಿ
2. ಪರಿಮಳಮ್ಮನಿಗೆ ಪಾದದಲ್ಲಿ ಮಕ್ಕಳು
3. ಕುದುರೆಯಿಲ್ಲದ ಕೋವಿ
4. ಹುಟ್ಟುತ್ತಲೇ ಹುಡುಗನ ತಲೇಲಿ ಟೋಪಿ
5. ಸಾಗರ ಪುತ್ರ ಸಾರಿಗೆ ಮಿತ್ರ
6. ಬಿಳಿಯ ಹುಡುಗನಿಗೆ ಕರಿಯ ಟೋಪಿ
7. ತನ್ನನ್ನು ತಾನೇ ತಿಂದು ಇಲ್ಲದಾಗುತ್ತದೆ
8. ತಾಯಿ ಕುಳಿತ್ತಿದ್ದಾಳೆ ಮಗಳು ತಿರುಗುತ್ತಾಳೆ
9. ಐದು ಮನೆಗಳಿಗೆ ಒಂದೇ ಅಂಗಳ
10. ಒಂದು ಕಂಬಕ್ಕೆ ನಾಲ್ಕು ಮೂಲೆ

1. ಬಿಳಿ ಮಕ್ಕಳಿಗೆ ಬಿಳಿ ಅಂಗಿ
2. ಅಮ್ಮನ ಚಾಪೆ ಮಡಚಲಾಗದು ಅಪ್ಪನ ದುಡ್ಡು ಎಣಿಸಲಾಗದು
3. ಅಜ್ಜಿಯ ಕೆಂಪು ಚೀಲ ತುಂಬಾ ಚಿನ್ನದ ನಾಣ್ಯ
4. ಚಿನ್ನದ ಗುಡಿಯಲ್ಲಿ ಬೆಳ್ಳಿಯ ದೇವರು
5. ಕೆಳಗಿನ ಗದ್ದೆಯಲ್ಲಿ ನೀರು ಮೇಲಿನ ಗದ್ದೆಯಲ್ಲಿ ಬೆಳೆ
6. ಚಿವುಟಿದರೆ ಮಿನುಗುತ್ತೆ ಕೈಯಲ್ಲಿರುವ ಕರಡಿಗೆ
7. ಅಜ್ಜನ ಹೊಟ್ಟೆ ಹಿಡಿದು ಕೊಂಡು ಮೊಮ್ಮಗ ನೇತಾಡುತ್ತಾನೆ
8. ದೇವಸ್ಥಾನ ಮೇಲೆ ಮುಗುಳಿ ಕೆಳಗೆ
9. ಹಸಿರು ಗಿಡದಲ್ಲಿ ಮೊಸರು ಚೆಲ್ಲಿದೆ
10. ತಲೆ ಮೇಲೆ ಹರಳು ಬಾಯಲ್ಲಿ ಬೆರಳು

1. ಚಳಿಯಲ್ಲಿ ಜೀವನ ಬಿಸಿಲಲ್ಲಿ ಮರಣ
2. ಒಂಟಿಕಾಲಿನ ಕೊಕ್ಕರೆಗೆ ಸಾವಿರಾರು ಮೊಟ್ಟೆಗಳು
3. ಒಂದು ಬಾವಿಗೆ ಒಂದೇ ಏತ
4. ನಿಂತರೆ ನಿಲ್ಲುತ್ತೆ, ಕೂತರೆ ಕೂರುತ್ತೆ, ನಡೆದರೆ ನಡೆಯುತ್ತೆ, ಕೈಗೆ ಸಿಗೋಲ್ಲ
5. ನೆರೆಕರೆಯಲ್ಲಿದ್ದರೂ ಒಬ್ಬರನೊಬ್ಬರು ನೋಡೋಕಾಗಲ್ಲ
6. ರಾಜನ ಹೊಟ್ಟೇಲಿ ಮಣಿಗಳ ರಾಶಿ
7. ಊರಿನ ಜನಕ್ಕೆಲ್ಲಾ ಒಂದೇ ಹಾಸಿಗೆ ಒಂದೇ ಹೊದಿಕೆ
8. ಎರಡು ತೋಡಿಗೆ ಒಂದೇ ಸೇತುವೆ
9. ಚಿನ್ನ ಎಸೆದು ಬೆಳ್ಳಿ ನುಂಗುತ್ತಾನೆ
10. ಒಂಟಿ ಕಾಲಿನ ಕೊಕ್ಕರೆಗೆ ನೂರಾರು ರೆಕ್ಕೆಗಳು

**ಶ್ರದ್ಧ**

**ಮೂರನೇ ದಿನದ ಚಟುವಟಿಕೆಗಳು**

**ಸಮಯ:** 60 ನಿಮಿಷ

ಉದ್ದೇಶ: ಸರಳವಾದ ಕವಿತೆಗಳನ್ನು ಓದಿ ಆಸ್ವಾದಿಸುವುದು

- ಪದ್ಯಗಳಿಗೆ ರಾಗ ಹಾಕುವುದು
- ಪದ್ಯವನ್ನು ಪೂರ್ತಿಗೊಳಿಸುವುದು
- ಕವಿತೆಗೆ ಸಂಬಂಧಿಸಿ ಸರಳವಾದ ಟಿಪ್ಪಣಿಗಳನ್ನು ತಯಾರಿಸುವುದು

**ಸಾಮಗ್ರಿ:** ಕವಿತೆಗಳ ಭಾಗಗಳನ್ನು ಬರೆದ ಚಾರ್ಟ್ ಅರಳುತಿದೆ ಅರಳುತಿದೆ ಮಲ್ಲಿಗೆ ಹೂವು ಅರಳಿದೆ.

ಸುತ್ತಲೂ ಪರಿಮಳ ಬೀರುತಿದೆ

(ಚಾರ್ಟ್/ಸ್ಲೈಡ್)

**ಪ್ರಕ್ರಿಯೆ**

ಪದ್ಯದ ಕೆಲವು ಸಾಲುಗಳನ್ನು ಬರೆದ ಚಾರ್ಟ್/ ಸ್ಲೈಡ್‌ನ್ನು ಪ್ರದರ್ಶಿಸುವುದು.

- ಅರಳುತಿದೆ ಅರಳುತಿದೆ
  ಮಲ್ಲಿಗೆ ಹೂವು ಅರಳುತಿದೆ
  ಸುತ್ತಲು ಪರಿಮಳ ಬೀರುತಿದೆ.

- ಅಧ್ಯಾಪಿಕೆ ಮತ್ತು ಮಕ್ಕಳು ಜತೆಯಾಗಿ ಪದ್ಯದ ಸಾಲುಗಳನ್ನು ಹಾಡುವುದು (ಮೂರು/ನಾಲ್ಕು ಸಲ)
- ಮುಂದುವರಿದು ಪದ್ಯದ ಉಳಿದ ಸಾಲುಗಳನ್ನು ಪೂರ್ತಿಗೊಳಿಸಲು ಮಕ್ಕಳಿಗೆ ಸಂದರ್ಭ ಒದಗಿಸಬೇಕು.

ಆರಂಭದ ಸಾಲನ್ನು ಅಧ್ಯಾಪಿಕೆ ಹಾಡುವುದು. ಮುಂದುವರಿದೆ ಸಾಲನ್ನು ಮಕ್ಕಳು ಪೂರ್ತಿಗೊಳಿಸಲಿ.

ಉದಾ: ಅರಳುತಿದೆ ಅರಳುತಿದೆ

..................................

ಯಾವುದಾದರೂ ಹೂವಿನ ಹೆಸರು ಹೇಳಿ ಪದ್ಯ ಮುಂದುವರಿಸಲಿ)

ಮೂರು ನಾಲ್ಕು ಸಾಲುಗಳನ್ನು ಈ ರೀತಿ ರಚಿಸಿ ಪದ್ಯ ಗಟ್ಟಿಯಾದ ಮೇಲೆ ಮಕ್ಕಳ ಸಣ್ಣ ಗುಂಪಿನಲ್ಲಿ ಕುಳಿತು ಪದ್ಯವನ್ನು ಸಾಕಷ್ಟು ಮುಂದುವರಿಸಿ ಬರೆಯಲಿ.

- ಆ ಮೇಲೆ ಪ್ರತಿಯೊಂದು ಗುಂಪು ಮಂಡಿಸುವುದು
- ಉಳಿದ ಗುಂಪು ಮೌಲ್ಯನಿರ್ಣಯ ಮಾಡುವುದು. ಉತ್ತಮವಾದುದು ಯಾವುದು? ಯಾಕೆ?
- ಉತ್ತಮವಾದುದನ್ನು ಅಭಿನಂದಿಸುವುದು.
- ಅವುಗಳನ್ನೆಲ್ಲ ಒಟ್ಟು ಗೂಡಿಸಿ ಸಂಚಿಕೆ ತಯಾರಿಸುವುದು.

ಸಂಚಿಕೆಯ ಬಿಡುಗಡೆ ಯಾವುದಾದರೂ ಮಗು ನಿರ್ವಹಿಸಲಿ (ಭಾಷಣ ಮಾಡಲು ಆ ಮಗುವಿಗೆ ಸಂದರ್ಭ ನೀಡುವುದು)

- ಮುಂದುವರಿದು ಕವಿತೆಗಳ ಪ್ರದರ್ಶನ.

**ದೊಡ್ಡಕ್ಕ**

ಅಕ್ಕ ಎಂದರೆ ನನ್ನಕ್ಕ
ನನ್ನಯ ಪ್ರೀತಿಯ ದೊಡ್ಡಕ್ಕ
ಅಮ್ಮನ ಕೊರತೆಯ ನೀಗಿಸುತ
ಅಕ್ಕರೆಯಿಂದಲಿ ಸಲಹುವಳು

ಸ್ನಾನವ ಮಾಡಿಸಿ
ಉಡುಪನು ತೊಡಿಸಿ
ತಿಂಡಿಯ ತಿನಿಸುವಳು
ತಲೆಯನು ಬಾಚಿ
ಕಾಡಿಗೆ ಹಚ್ಚಿ
ತಿಲಕವನಿರಿಸುವಳು

ಕೆನ್ನೆಗೆ ಮುತ್ತನ್ನೀಯುತಲಿ
ಶಾಲೆಗೆ ಕಳಿಸುವಳೆನ್ನಕ್ಕ
ಹಸಿವೆಯ ಮರೆತು
ನಿದ್ರೆಯ ತೊರೆದು
ಜತನದಿ ಕಾಯುವಳೆನ್ನಕ್ಕ

- ಪದ್ಯದ ಚಾರ್ಟ್/ ಸ್ಲೈಡ್‌ನ್ನು ಪ್ರದರ್ಶಿಸುವುದು
- ಮಕ್ಕಳ ನಾಲ್ಕೋ, ಐದೋ ಜನರ ಗುಂಪುಗಳಲ್ಲಿ ಪದ್ಯಕ್ಕೆ ರಾಗ ಹಾಕಿ ಮಂಡಿಸುವುದು (ಪದ್ಯಕ್ಕೆ ರಾಗ ಹಾಕುವ ಅಧ್ಯಾಪಿಕೆ) ಮಕ್ಕಳೊಂದಿಗೆ ಬೆರೆತು ಬೇಕಾದ ಸಹಾಯವನ್ನು ನೀಡುವುದು)
- ಮಕ್ಕಳು ಮಂಡಿಸುವುದು. ಉತ್ತಮವಾದ ರಾಗವನ್ನು ಮಕ್ಕಳೇ ಕಂಡುಕೊಳ್ಳುವುದು.
- ಉತ್ತಮವೆನಿಸಲು ಕಾರಣವೇನು? ಚರ್ಚೆ
- ಆ ಮೇಲೆ ಈಗಿರುವ ಗುಂಪಿನಲ್ಲಿ ಕುಳಿತು ಪದ್ಯಕ್ಕೆ ಸಂಬಂಧಿಸಿ ಪ್ರಶ್ನೆಗಳನ್ನು ತಯಾರಿಸುವುದು. (ಈ ಸಂದರ್ಭದಲ್ಲಿ ಅಧ್ಯಾಪಿಕೆ, ಗುಂಪುಗಳಿಗೆ ಆವಶ್ಯವನ್ನು ನೀಡುತ್ತಾ ತಾನು ಕಂಡುಕೊಂಡ ವಿಚಾರಗಳು ದಾಖಲಾತಿ ಮಾಡಬೇಕು)
- ತಯಾರಿಸಿದ ಪ್ರಶ್ನೆಗಳನ್ನು ಮಂಡಿಸುವುದು
- ಪ್ರಶ್ನೆಗಳಿಗೆ ಮಕ್ಕಳು ಕಂಡುಕೊಂಡ ಉತ್ತರಗಳನ್ನು ಹೇಳುವುದು. ಮಕ್ಕಳು ತಾವು ತಿಳಿದುಕೊಂಡ ಆಶಯಗಳನ್ನು ಒಳಗೊಳ್ಳುವಂತೆ ಪದ್ಯದ ಕುರಿತು ಲಘು ಟಿಪ್ಪಣಿ ತಯಾರಿಸುವುದು. (ಮನೆ ಕೆಲಸವಾಗಿ ಪೂರ್ತಿಗೊಳಿಸುವುದು.)